

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ವಾರಪತ್ರಿಕೆ

ಸಂಪುಟ ೧೨ ಸಂಚಿಕೆ ೧೮ ರೂ ೧-೫೦

ಮೇ ೬ ೧೯೯೦

ಕಾಂಗ್ರೆ ಪಕ್ಷ ಪೌರ ಚುನಾವಣೆಗಳಲ್ಲಿ ಗೆದ್ದಿದೆಯೆ?

ಕಾಂಗ್ರೆಸ್ (ಐ) ಪುರಸಭಾ ಚುನಾವಣೆಗಳಲ್ಲಿ ಅನೇಕ ಕಡೆ ಗೆದ್ದಿದೆ ಎಂದು ವಿವಿಧ ಮಹಾನಗರ ಪಾಲಿಕೆಗಳಲ್ಲಿ ಮೂರರಲ್ಲಿ ಸ್ಪಷ್ಟ ಬಹುಮತಗಳಿಸಿದೆ ಎಂದು ಅಲ್ಲಲ್ಲಿಯ ಚುನಾವಣಾಧಿಕಾರಿಗಳು ಘೋಷಿಸಿದ್ದಾರೆ. ಈ ಸಂಸ್ಥೆಗಳನ್ನು ಜನತಾದಳದಿಂದ ಕಾಂಗ್ರೆಸ್(ಐ) ಮರಳಿ ಗೆದ್ದುಕೊಂಡಿದೆ ಎಂದು ಪತ್ರಿಕೆಗಳು ಬರೆಯುತ್ತಿವೆ. ಆದರೆ ನಿಜ ಪರಿಸ್ಥಿತಿ ಏನು? ಕಾಂಗ್ರೆ ಈ ನಗರಗಳ ಜನತೆಯ ಬಹುಮತವನ್ನು ನಿಜವಾಗಿಯೂ ಪಡೆಯಿತೆ? ಪುರ ಜನರು ಒಲಿದು ಪೌರಸಂಸ್ಥೆಗಳನ್ನು ಆಳುವುದಕ್ಕೆ ಕಾಂಗ್ರೆ ಪಕ್ಷವೇ ಶ್ರೇಷ್ಠ ಎಂದು ಭಾವಿಸಿದರೆ? ಕಾಂಗ್ರೆ ಈ ಚುನಾವಣೆಗಳಲ್ಲಿ ಗೆಲ್ಲಲು ಪ್ರಬಲ ಕಾರಣಗಳೇನು? ಇದು ಇಂದು ಕರ್ನಾಟಕದ ಪ್ರಜ್ಞಾವಂತರನ್ನೆಲ್ಲಾ ಕಾಡುತ್ತಿರುವ ಪ್ರಶ್ನೆ - ಕರ್ನಾಟಕದ ಮತದಾರ ಜನತೆಯನ್ನು - ೧೮ ವರ್ಷಗಳ ವಯಸ್ಸನ್ನು ಮೀರಿರುವ ಎಲ್ಲರನ್ನು ಕಾಡಬೇಕಾದ ಪ್ರಶ್ನೆ.

ಈ ಚುನಾವಣೆಗಳು ನಡೆಯುವ ಮುನ್ನ ನಮ್ಮ ನಗರ, ಪಟ್ಟಣದ ಆಡಳಿತವನ್ನು ನಡೆಸುವ ನಮಗೆ ದಿನನಿತ್ಯವೂ ಸಿಗಬೇಕಾದ ಶುದ್ಧ ನೀರು, ಗಾಳಿ, ಸ್ವಚ್ಛತೆಯನ್ನು, ನಮ್ಮ ಮನೆಯಮುಂದಿನ ರಸ್ತೆ, ಚರಂಡಿಗಳನ್ನು ನಿಯಂತ್ರಿಸುವ ಸಂಸ್ಥೆಗಳಿವು ಎಂಬ ಆಸ್ಥೆಯಿಂದ ನಗರದ, ಪಟ್ಟಣದ ಜನರೆಲ್ಲರೂ ಒಂದು ಉತ್ಸಾಹದಿಂದ ಮತದಾನ ಮಾಡಿ ಈ ಪಕ್ಷ ನಮಗೆ ನಾಗರೀಕ ಸೌಲಭ್ಯಗಳನ್ನು ಕನಿಷ್ಟ ಮಟ್ಟದಲ್ಲಿಯಾದರೂ ಒದಗಿಸಬಲ್ಲ ಪಕ್ಷ ಎಂದು ಆಯ್ಕೆ ಮಾಡುವ ಪರಿಸರ ಇರಲಿಲ್ಲ ಎಂಬುದು ಎಳೆಯ ಬಾಲಕರಿಗೂ ತಿಳಿದ ವಿಷಯ. ಚುನಾವಣೆಗಳು ನಡೆಯುವುದೋ ಇಲ್ಲವೊ ಎಂಬ ಶಂಕೆ, ಇದೆಂತಹ ಚುನಾವಣೆಗಳು ಎಂಬ ನಿರಾಸಕ್ತಿ ಜನರಲ್ಲಿ ಮೂಡಿದಾಗ ಕೊನೆಯಗಳಿಗೆಯಲ್ಲಿ ಆರಂಭವಾದ ಚುನಾವಣೆಗಳಿವು. ಮತದಾನದ ದಿನವೂ ಕೂಡ ಎಲ್ಲೆಲ್ಲಿಯೂ ಹಿಂಸಾಚಾರ, ಹೊಡೆದಾಟ ಸುಳ್ಳು ಮತಗಳು ಹೊಡೆದಾಟಗಳು ಕೊಲೆಗಳು ಇವುಗಳ ಮೂಲಕ ಉದ್ದೇಶಪೂರ್ವಕವಾಗಿ ಭಯದ ವಾತಾವರಣ ಕಲ್ಪಿಸಿ ಜನ ಮತಗಟ್ಟೆಗೆ ಬರದಂತೆ ತಡೆದದ್ದು.

ಇದರಿಂದಾಗಿ ಮತದಾನ ನಡೆದಿರುವುದೆಷ್ಟು. ಶೇ ೩೦-೪೦ ನಗರಗಳಲ್ಲಿ ಶೇ ೪೦ ರಿಂದ ೫೦ ಪಟ್ಟಣಗಳಲ್ಲಿ ಎಂದು ಪತ್ರಿಕೆಗಳ ಲೆಕ್ಕಾಚಾರ (ಇದು ಕೂಡ ಹೆಚ್ಚು ಎನ್ನುವ ಅಂದಾಜು) ಎಲ್ಲ ಪತ್ರಿಕೆಗಳೂ ಚುನಾವಣಾ ಪೂರ್ವ ಸಮೀಕ್ಷೆ ಮಾಡಿ ವರದಿಗಳನ್ನು ಕೊಡಲು ಹೋದಾಗ ಕಂಡದ್ದು ಸಾರ್ವತ್ರಿಕ ನಿರಾಸಕ್ತಿಯನ್ನೇ. ಶೇ ೩೦ ಜನ ಮತದಾರರು ಮಾತ್ರ ಮತದಾನ ಮಾಡಿ ತಮಗೆ ಬೇಕಾದ ಪಕ್ಷವನ್ನು ಆಯ್ಕೆ ಮಾಡಿದ್ದಾರೆಂದರೆ ಮತಗಟ್ಟೆಗೆ ಬಾರದಜನ ಆಯ್ಕೆ ಮಾಡಿದ್ದು ಯಾವ ಪಕ್ಷ? ಚುನಾವಣೆಗಳು ನಡೆಯಲು ಇದ್ದ ವಾತಾವರಣ, ನಡೆದ ರೀತಿಯನ್ನು ಕಂಡು ಶೇ ೬೦-೭೦ ಜನರು

→ ಪುಟ 8 ಕ್ಕೆ


ಬೆಲೆಯೇರಿಕೆ ತಡೆಯಲು ತುರ್ತುಕ್ರಮ ಅಗತ್ಯ ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ ಒತ್ತಾಯ

ಮೇ ೧೬ ರಂದು ದೇಶವ್ಯಾಪಿ ಪ್ರಕ್ಷೋಭೆಗೆ ಎಡಪಕ್ಷಗಳ ಕರೆ

ದೇಶದ ದುರ್ದೆಸೆಗೆ ಕಾರಣವಾದ ಕಾಂಗ್ರೆಸ್(ಐ) ಧೋರಣೆಗಳಿಂದ ನಿರ್ಣಾಯಕವಾಗಿ ದೂರ ಸರಿಯಲು, ಅವನ್ನು ಬದಲಿಸಲು ರಾಷ್ಟ್ರೀಯ ರಂಗದ ಕೇಂದ್ರ ಬಜೆಟ್ ಪ್ರಯತ್ನಿಸಲಿಲ್ಲ. ರೈಲ್ವೆ ಮತ್ತು ಸಾಮಾನ್ಯ ಬಜೆಟ್ ಪ್ರಸ್ತಾಪಗಳು ಹಣದುಬ್ಬರ ಹೆಚ್ಚಿಸಿ ಬೆಲೆಯೇರಿಕೆಗೆ ಕಾರಣವಾಗುತ್ತವೆ ಎಂದು ಸಿ.ಪಿ.ಐ(ಎಂ) ಪೊಲಿಟ್ ಬ್ಯೂರೋ ಆಗಲೇ ಎಚ್ಚರಿಸಿತ್ತು.

ಈ ನಡುವೆ ಎಲ್ಲಾ ಜೀವನಾವಶ್ಯಕ ಸಾಮಗ್ರಿಗಳ ಬೆಲೆಯೇರಿಕೆಯಿಂದಾಗಿ ಪರಿಸ್ಥಿತಿ ಹದಗೆಟ್ಟಿದೆ. ಸಗಟು ಬೆಲೆಗಳು ನಿರಂತರ ಏರುತ್ತಿವೆ. ಸಿಮೆಂಟ್ ಹತೋಟಿ ತೆಗೆದುದರಿಂದ ಅದರ ಬೆಲೆಯೇರುತ್ತಿದೆ. ಪೆಟ್ರೋಲ್, ಡೀಸಲ್‌ಗಳಿಗೆ ಬಜೆಟ್‌ನಲ್ಲಿ ಏರಿಸಿದ ಬೆಲೆಗಳಲ್ಲದೆ ಸಕ್ಕರೆ, ಖಾದ್ಯ ತೈಲದ ಬೆಲೆಗಳೂ ಏರುತ್ತಿವೆ. ಗೋಧಿ ಬೆಲೆ ಹೆಚ್ಚಿದೆ. ಇವೆಲ್ಲಾ ಸಾಮಾನ್ಯ ಜನರಿಗೆ ಸಂಕಷ್ಟಗಳನ್ನು ತಂದಿದೆ ಎಂದು ಏಪ್ರಿಲ್ ೨೭ ರಿಂದ ೨೯ ರವರೆಗೆ ದೆಹಲಿಯಲ್ಲಿ ಸಭೆ ಸೇರಿದ ಸಿ.ಪಿ.ಐ(ಎಂ) ಪೊಲಿಟ್ ಬ್ಯೂರೋ ಪತ್ರಿಕಾ ಹೇಳಿಕೆ ಅಭಿಪ್ರಾಯಪಟ್ಟಿದೆ. ಸರಕಾರ ತಕ್ಷಣ ಬೆಲೆಯೇರಿಕೆ ತಡೆಯಲು, ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಲು, ಜನರಿಗೆ ಪರಿಹಾರ ನೀಡಲು ತುರ್ತು ಕ್ರಮ ಕೈಗೊಳ್ಳಬೇಕೆಂದು ಪಿ.ಬಿ.ಒತ್ತಾಯಿಸಿದೆ. ಇದಕ್ಕೆ ಮಾಡಬೇಕಾದ ಮೊದಲ ಕೆಲಸವೆಂದರೆ ಹಣಕಾಸು ಮಸೂದೆಯಲ್ಲಿ ನಮೂದಿಸಲಾಗುವ ಬಜೆಟ್ ಪ್ರಸ್ತಾಪ ಗಳನ್ನು ಪರಿಷ್ಕರಿಸುವುದು. ಇದರಿಂದ ಮಾತ್ರವೇ ಬೆಲೆಯೇರಿಕೆಯಿಂದ ಜನ ಸಾಮಾನ್ಯರ ಜೀವನ ಮಟ್ಟದ ಮೇಲಾಗುವ ಹಲ್ಲೆಗಳಿಂದ ಅವರು ತಪ್ಪಿಸಿಕೊಳ್ಳಲು ಸಾಧ್ಯ ಎಂದು ಹೇಳಿರುವ ಪೊಲಿಟ್ ಬ್ಯೂರೋ ಈ ಬಗ್ಗೆ ಎಡಪಕ್ಷಗಳ ಒಂದು ನಿಯೋಗ ಪ್ರಧಾನ ಮಂತ್ರಿಗಳನ್ನು ಭೇಟಿಯಾಗಿ ಈ ತುರ್ತು ಕ್ರಮದ ಅಗತ್ಯವನ್ನು ಮನವರಿಕೆ ಮಾಡಿಸಬೇಕೆಂದು ತನ್ನ ಸಭೆಯಲ್ಲಿ ನಿರ್ಧರಿಸಿತ್ತು. ಇತರ ಎಡಪಕ್ಷಗಳ ಜತೆಗೆ ಈ ಬಗ್ಗೆ ದೇಶವ್ಯಾಪಿ ಪ್ರಚಾರ ಪ್ರಕ್ಷೋಭೆ ನಡೆಸಲು ಕೂಡಾ ಪಿ.ಬಿ. ನಿರ್ಧರಿಸಿತು.

ಇದರ ಪ್ರಕಾರ ಏಪ್ರಿಲ್ ೩೦ ರಂದು ನವದೆಹಲಿಯಲ್ಲಿ ಸೇರಿದ ನಾಲ್ಕು ಎಡಪಕ್ಷಗಳ ಸಭೆ ಮೇ ೧೬ ರಂದು ರಾಷ್ಟ್ರವ್ಯಾಪಿ ಪ್ರಕ್ಷೋಭೆ ನಡೆಸಲು ನಿರ್ಧರಿಸಿದೆ.



ಒಳಗಿನ ಪುಟಗಳಲ್ಲಿ

ರಾಜೀವಗಾಂಧಿಯ ಕಾರ್ಮಿಕ-ವಿರೋಧಿ ಜವಳಿ ನೀತಿ ಇನ್ನೂ ಮುಂದುವರಿಯುತ್ತಿದೆ

ರಾಜೀವಗಾಂಧಿಗಾಂದಿ ಸರ್ಕಾರ ಸೋಲಿಸಲ್ಪಟ್ಟು ೪ ತಿಂಗಳುಗಳಾದರೂ ಅವರದೇ ಆದ ಕಾರ್ಮಿಕ ವಿರೋಧಿ ಜವಳಿ ನೀತಿಯನ್ನು ಜನತಾದಳ ಸರ್ಕಾರದ ಆದೇಶದಂತೆ ರಾಷ್ಟ್ರೀಯ ಜವಳಿ ನಿಗಮವು ಮುಂದುವರಿಸುತ್ತಾ ಬಂದಿರುವುದು ಕಳವಳದ ಸಂಗತಿ ಎಂದಿರುವ ಸಿ.ಐ.ಟಿ.ಯು. ರಾಜ್ಯ ಸಮಿತಿ ಇದರಿಂದಾಗಿ ರಾಜ್ಯದ ಸಾವಿರಗಟ್ಟಲೆ ಜವಳಿ ಕಾರ್ಮಿಕರು ಸಂಕಟವನ್ನು ಎದುರಿಸುತ್ತಿದ್ದಾರೆ ಎಂದಿದೆ. ಜನತಾದಳದ ಸರ್ಕಾರದ ರಚನೆ ಆದಾಗ ಈ ಧೋರಣೆಯು ಬದಲಾಗಬಹುದೆಂಬ ನಿರೀಕ್ಷೆ ಈ ಕಾರ್ಮಿಕರದಾಗಿತ್ತು. ರಾಜ್ಯದ ೩ ಎನ್.ಟಿ.ಸಿ. ಕಾರ್ಖಾನೆಗಳಾದ ಎಂ.ಎಸ್.ಕೆ. ಮಿಲ್ ಗುಲ್ಬರ್ಗಾ, ಬೆಂಗಳೂರಿನ ರಾಜಾ ಮತ್ತು ಮಿನರ್ವ ಮಿಲ್ಲುಗಳಲ್ಲಿ ದುಡಿಯುತ್ತಿರುವ ೧೦೦೦ಕ್ಕೆ ಮೇಲ್ಪಟ್ಟು ಕಾರ್ಮಿಕರಿಗೆ ಕ್ಯಾಷುಯಲ್ ಎಂಬ ಹೆಸರಿಟ್ಟು ಕಾನೂನು ಬಾಹಿರವಾಗಿ ಒಪ್ಪಂದಕ್ಕೆ ವಿರೋಧವಾಗಿ ಕಾನೂನಿನ ಸೌಲತ್ತುಗಳು ಕೊಡುವಂತಹುದು ಮತ್ತು ಕೆಲಸವನ್ನು ಖಾತರಿ ಮಾಡದಿರುವುದು ಹಿಂದಿನ ಸರ್ಕಾರದ ನೀತಿಯಾಗಿತ್ತು. ಇದೇ ನೀತಿಯನನ್ನು ಹೊಸ ಕೇಂದ್ರ ಸರ್ಕಾರವು ಅನುಸರಿಸುತ್ತಿರುವುದು ಶೋಚನೀಯ.

ಗುಲ್ಬರ್ಗಾದ ಎಂ.ಎಸ್.ಕೆ. ಮಿಲ್‌ನ ಕಾರ್ಮಿಕರು ಈ ಧೋರಣೆಗೆ ವಿರೋಧವಾಗಿ ಮುಷ್ಕರ ಹೂಡಿದ್ದಾರೆ. ಒಂದು ಸಾರಿ ಖಾಯಂ ಮಾಡಲ್ಪಟ್ಟು ಪುನಃ ಹಂಗಾಮಿಯಾಗಿ ಮಾಡಲ್ಪಟ್ಟ ೩೦೯ ಕಾರ್ಮಿಕರ ಸಮಸ್ಯೆ ಇಲ್ಲಿ ತೀವ್ರವಾಗಿದೆ. ಕಾಶ್ಮೀರ ಮತ್ತು ಪಂಜಾಬಿನ ಹಾಗೆ ಪರಿಹಾರ ಕಂಡುಕೊಳ್ಳಲಾಗದಂತಹ ಸಮಸ್ಯೆ ಇದಲ್ಲವಾದರೂ ಜನತಾ ದಳದ ಸರ್ಕಾರ ಕಾನೂನು ಅನುಸರಿಸದೆ ಕಾರ್ಮಿಕ-ವಿರೋಧಿ ನೀತಿಯನ್ನು ಮುಂದುವರಿಸುತ್ತಿದೆ. ಎಂ.ಎಸ್.ಕೆ. ಮಿಲ್ಲಿನ ೩೦೯ ಕಾರ್ಮಿಕರನ್ನು ಈ ಕೂಡಲೇ ಖಾಯಂ ಮಾಡಬೇಕೆಂದು ಸಿ.ಐ.ಟಿ.ಯು. ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ಬೆಂಗಳೂರಿನ ರಾಜಾ ಮಿಲ್ ಬೆಂಕಿ ಅಪಘಾತದಿಂದ ಮುಚ್ಚಲ್ಪಟ್ಟು ಮೂರು ತಿಂಗಳುಗಳಾಗಿವೆ ಈ ಮಿಲ್‌ನಲ್ಲಿ ೪೧೮ ಕ್ಯಾಷುಯಲ್ ಕಾರ್ಮಿಕರಿಗೆ ಲೇ ಆಫ್ ಪರಿಹಾರ ಸಮೇತ ಸಿಗುತ್ತಿಲ್ಲ. ಕಾನೂನು ಬಾಹಿರ ಕೃತ್ಯದಿಂದ ಕಾರ್ಮಿಕರನ್ನು ರಕ್ಷಿಸಲು ಶ್ರೇಷ್ಠ ನ್ಯಾಯಾಲಾಯವು ವಿಫಲವಾಗಿದೆ. ಕೂಡಲೆ ಪರಿಹಾರ ಸಿಗದಿರುವ ಕೈಗಾರಿಕಾ ವಿವಾದದ ಹಾದಿಯನ್ನು ಶ್ರೇಷ್ಠ ನ್ಯಾಯಾಲಯವು ತೋರಿಸುತ್ತಿದೆ. ಸುಟ್ಟು ಹೋದ ನೂಲಿನ ವಿಭಾಗವನ್ನು ಪುನರಾರಂಭಿಸಲು ಕೇಂದ್ರ ಸರ್ಕಾರ ಅನುಮತಿ ನೀಡಿದ ಹಾಗೆ ಕಂಡು ಬರುವುದಿಲ್ಲ. ಅಪಘಾತಕ್ಕೆ ಒಳಗಾದ ನೇಯ್ಗೆ ವಿಭಾಗದ ಆಟೋಮ್ಯಾಟಿಕ್ ಮಗ್ಗಗಳು ಮಾತ್ರ ಶುರು ಮಾಡುವುದಾಗಿ ಆಡಳಿತ ವರ್ಗ ತಿಳಿಸಿರುತ್ತಾರೆ. ನೇಯ್ಗೆ ವಿಭಾಗದ ಸಾದಾ ಮಗ್ಗಗಳಾದರೂ ಶುರು ಮಾಡಲು ಅವರುಗಳು ತಯಾರಾಗುತ್ತಿಲ್ಲ. ೪೧೮ ಕಾರ್ಮಿಕರ ಸಮಸ್ಯೆಯೂ ಕಂಟಕವಾಗಿದೆ. ರಾಜೀವ್ ಗಾಂಧಿಯವರ ಕುಖ್ಯಾತ ಜವಳಿ ನೀತಿಯನ್ನು ಮುಂದುವರಿಸುತ್ತಿರುವ ಜನತಾ ದಳದ ಸರ್ಕಾರದ ಧೋರಣೆ 'ಯನ್ನು ಕಟುವಾಗಿ ಟೀಕಿಸದೆ ಅನ್ಯ ಮಾರ್ಗವಿಲ್ಲ. ಕೂಡಲೇ ರಾಜಾಮಿಲ್‌ನನ್ನು ಪುನರಾರಂಭಿಸಲು ಎಲ್ಲಾ ಕಾರ್ಮಿಕರಿಗೂ ಕೆಲಸ ನೀಡಲು ಕ್ಯಾಷುಯಲ್ ಕಾರ್ಮಿಕರನ್ನು ಖಾಯಂ ಮಾಡಲು ಮತ್ತು ಪೂರ್ಣ ಸವಲತ್ತುಗಳನ್ನು ಕೊಡಲು ಸಿ.ಐ.ಟಿ.ಯು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ಪೇಪರ್‌ಮಿಲ್ ಬೀಗ ಮುದ್ರೆ ಸಿ.ಐ.ಟಿ.ಯು. ಖಂಡನೆ.

ಭದ್ರಾವತಿಯ ಮೈಸೂರು ಪೇಪರ್ ಮಿಲ್ಸ್ ಕಾರ್ಖಾನೆಯಲ್ಲಿ ಬೀಗ ಮುದ್ರೆ ಮಾಡಿದ ರಾಜ್ಯ ಸರ್ಕಾರದ ನೀತಿಯನ್ನು ಸಿ.ಐ.ಟಿ.ಯು. ಖಂಡಿಸಿದೆ. ಈ ಬೀಗ ಮುದ್ರೆಯನ್ನು ಕೂಡಲೇ ತೆಗೆದು ಕಾರ್ಮಿಕರಿಗೆ ಪೂರ್ಣ ವೇತನವನ್ನು ಕಟ್ಟಿಕೊಡಬೇಕೆಂದು ಸಿ.ಐ.ಟಿ.ಯು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಮಂಗಳೂರಿನಲ್ಲಿ ರೈತ ಕೃಷಿಕೂಲಿಗಾರರ ಧರಣಿ

ಏಪ್ರಿಲ್ ೧೬ರಂದು ಮಂಗಳೂರು ತಾಲ್ಲೂಕು ರೈತ ಸಂಘದ ನೇತೃತ್ವದಲ್ಲಿ ರೈತರು, ಕೃಷಿಕೂಲಿಕಾರರು ಮೆರವಣಿಗೆ ನಡೆಸಿ ತಾಲ್ಲೂಕು ಕಚೇರಿಯೆದುರು ಸಾಮೂಹಿಕ ಧರಣಿ ನಡೆಸಿದರು. ಕೃಷಿ ಕಾರ್ಮಿಕ ಮಹಿಳೆಯರೂ ಈ ಪ್ರತಿಭಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ರೈತರು, ಕೃಷಿಕೂಲಿಗಾರರು ಸಹಕಾರಿ ಸಂಘಗಳು ಮತ್ತು ಬ್ಯಾಂಕುಗಳಿಂದ ಪಡೆದ ೧೦ ಸಾವಿರ ರೂ. ವರೆಗಿನ ಸಾಲ ರದ್ದಾಗಬೇಕು, ಕಡಿಮೆ ಬಡ್ಡಿ ದರದಲ್ಲಿ ಹೊಸ ಸಾಲ, ರೈತರಿಂದ ಬಲಾತ್ಕಾರವಾಗಿ ಸಾಲವಸೂಲಿ ನಿಲ್ಲಬೇಕು, ಸರಕಾರಿ ಭೂಮಿಯಲ್ಲಿ ಅಕ್ರಮ ಕೃಷಿಕೂಲಿಕಾರರ ಮೇಲೆ ಹಿಂದೆ ಎಕರೆಗೆ ಹತ್ತು ರೂ. ದರದಲ್ಲಿ ವಸೂಲಿ ಮಾಡುತ್ತಿದ್ದ ದಂಡ ಈಗ ೨೦೦-೫೦೦ ರೂ. ಕೊಡಲು ಒತ್ತಾಯಿಸುವುದನ್ನು ನಿಲ್ಲಿಸಬೇಕು, ಇವರ ಭೂಮಿ ಸ್ವಾಧೀನ ಖಾಯಂಗೊಳಿಸಬೇಕೆಂದು ಒತ್ತಾಯಿಸುತ್ತಿದ್ದ ರೈತರು, ಕೃಷಿಕೂಲಿಕಾರರ ಪರವಾಗಿ ತಾಲ್ಲೂಕು ರೈತ ಸಂಘದ ಅಧ್ಯಕ್ಷ ಬಿ. ಬಾಬು ಪೂಜಾರಿ, ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್, ಜಿಲ್ಲಾ ರೈತ ಸಂಘದ ಉಪಾಧ್ಯಕ್ಷ ಜನಾರ್ಧನ ನಾಯಕ್, ಯು.ಪಿ.ಡಿಸೋಜ ಮತ್ತಿತರರು ಅಸಿಸ್ಟೆಂಟ್ ಕಮಿಶನರ್‌ವರಿಗೆ ಮನವಿಪತ್ರವನ್ನು ಸಲ್ಲಿಸಿದರು.

ಚಿಂತಾಮಣಿಯಲ್ಲಿ ಸಹಿ ಸಂಗ್ರಹ-ಸಮಾವೇಶ

ಸಾಲಮನ್ನಾ ಅನುಷ್ಠಾನ, ಎಲ್ಲಾ ಬಡವರ ಸಾಗುವಳಿ ಭೂಮಿಯನ್ನು ಸಕ್ರಮಗೊಳಿಸಬೇಕೆಂದು ಒತ್ತಾಯಿಸಿ ಕೋಲಾರ ಜಿಲ್ಲೆಯ ಚಿಂತಾಮಣಿಯಲ್ಲಿ ತಾಲ್ಲೂಕು ರೈತ ಸಂಘ ಕಾರ್ಯಕ್ರಮ ರೂಪಿಸಿಕೊಂಡಿದೆ. ಜಿಲ್ಲೆಯ ರೈತರ ಜ್ವಲಂತ ಸಮಸ್ಯೆಯಾದ ವಿದ್ಯುತ್ ಕೊರತೆ ನೀಗಿಸಬೇಕೆಂದೂ ರೈತರು ಒತ್ತಾಯಿಸಲಿದ್ದಾರೆ. ಈ ಬಗ್ಗೆ ತಾಲ್ಲೂಕಿನಾದ್ಯಂತ ಮೇ ೧೦ ರ ತನಕ ಸಹಿಸಂಗ್ರಹ ನಡೆಸಿ ಮೇ ೧೦ ರಂದು ಚಿಂತಾಮಣಿಯಲ್ಲಿ ಬೃಹತ್ ಸಮಾವೇಶ ನಡೆಸಲು ತಾಲ್ಲೂಕು ಸಮಿತಿಯ ವಿಸ್ತೃತ ಸಭೆ ಏಪ್ರಿಲ್ ೧೪ರಂದು ಸೇರಿ ನಿರ್ಧರಿಸಿತು.

"ಚಳುವಳಿ ಮತ್ತು ಸಂಘಟನೆ"ಯನ್ನು ಜೊತೆ ಜೊತೆಯಾಗಿ ಒಯ್ಯಬೇಕೆಂದು ಸಹಿ ಸಂಗ್ರಹದ ಜೊತೆಗೆ ರೈತ ಸಂಘದ ಸದಸ್ಯತ್ವ ನೊಂದಾವಣೆಯನ್ನೂ ನಡೆಸಲು ಕಾಂ. ಚೆನ್ನಪ್ಪ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆ ನಿರ್ಣಯಿಸಿತು. ಇದಕ್ಕಾಗಿ ೫೦೦೦ ಕರಪತ್ರಗಳನ್ನು ಹೊರತರಲಾಗುವುದು ಸಭೆಯಲ್ಲಿ ಕಾಂ. ಜಿ.ವಿ. ಅಶ್ವಥ್ ನಾರಾಯಣ ರೆಡ್ಡಿಯವರು ಹಾಜರಿದ್ದು ಮಾರ್ಗದರ್ಶನ ನೀಡಿದರು.

ಸಭೆ ಈ ಕೂಡಲೇ ರೈತರ ಅವರ ಸಮಸ್ಯೆಗಳನ್ನು ಪರಿಹರಿಸಬೇಕೆಂದು ಒತ್ತಾಯಿಸಿದೆ.

ದಾಂಡೇಲಿಯಲ್ಲಿ ಪ್ರತಿಭಟನೆ

ಜನ-ವಿರೋಧಿ ಬಜೆಟ್ ಪ್ರಸ್ತಾಪಗಳ ವಿರುದ್ಧ ದಾಂಡೇಲಿಯಲ್ಲಿ ಏಪ್ರಿಲ್ ೫ ರಂದು ನೂರಾರು ಕಾರ್ಮಿಕರು ಸಿ.ಪಿ.ಐ. (ಎಂ) ಕಾರ್ಯಕರ್ತರು ಮೆರವಣಿಗೆ ನಡೆಸಿದರು. ಸಂಡೇ ಮೈದಾನದಲ್ಲಿ ನಂತರ ನಡೆದ ಬಹಿರಂಗ ಸಭೆಯಲ್ಲಿ ಬಜೆಟ್‌ನ ತೆರಿಗೆ ಏರಿಕೆ ಪ್ರಸ್ತಾಪಗಳನ್ನು ಚರ್ಚಿಸಲಾಯಿತು. ಕಾಂ. ಪುಲಕರ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಟಿ.ಎನ್. ನಾಯ್ಕ , ಹರೀಶ ನಾಯ್ಕ, ಅಕ್ರಮ್ ಖಾನ್, ಭೀಮರಾವ್, ಎಂ.ಬಿ. ಕಟ್ಟಿ ಮಾತನಾಡಿದರು. ಪ್ಲ್ಯಾವುಡ್ ಕಾರ್ಖಾನೆಯ ಸಂಘದ ಪದಾಧಿಕಾರಿ ಕಾಂ.ಬಾವಿಕಟ್ಟಿಯವರೂ ಮಾತನಾಡಿದರು.

ಏಪ್ರಿಲ್ ೬ರಂದು ಕಾಂ.ಬಿ.ಟಿ.ರಣದಿವೆಯವರ ನಿಧನದ ಸುದ್ದಿ ತಿಳಿದ ಕೂಡಲೇ ಸಿ.ಪಿ.ಐ.(ಎಂ) ಕಚೇರಿಯಲ್ಲಿ ಸಭೆ ನಡೆಸಿ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಜಿಲ್ಲಾ ಸಮಿತಿ ಸಭೆ

ಏಪ್ರಿಲ್ ೨ರಂದು ಕಾಂ. ಸದಾನಂದ ಮೋಹಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದ ಸಿ.ಪಿ.ಐ.(ಎಂ) ವಿಜಾಪೂರ ಜಿಲ್ಲಾ ಸಮಿತಿ ರಾಜ್ಯಾದ್ಯಂತ ೧೦೫೦ ರೂ. ಕನಿಷ್ಠ ಕೂಲಿಗಾಗಿ ಸಿ.ಐ.ಟಿ.ಯು. ನೇತೃತ್ವದಲ್ಲಿ ರಾಜ್ಯಾದ್ಯಂತ ನಡೆಯಲಿರುವ ಜಾಥಾ, ಜೈಲ್‌ಭರೋ ಚಳುವಳಿಗೆ, ಅಕ್ರಮ ಸಾಗುವಳಿ ಭೂಮಿಯ ಸಕ್ರಮ, ಸಾಲಮನ್ನಾ ಮುಂತಾದ ಬೇಡಿಕೆಗಳಿಗಾಗಿ ಕರ್ನಾಟಕ ಪ್ರಾಂತ ರೈತ ಸಂಘದ, ಕೃಷಿ ಕೂಲಿಗಾರ ಸಂಘದ ನೇತೃತ್ವದಲ್ಲಿ ನಡೆಯಲಿರುವ ಕಾರ್ಯಕ್ರಮಕ್ಕೆ ಬೆಂಬಲ ಸೂಚಿಸಿದೆ. ವಿಜಾಪುರದ ಸಹಕಾರಿ ನೂಲಿನ ಗಿರಣಿ ಮತ್ತು ಗುಲ್ಬರ್ಗಾದ ಎಂ.ಎಸ್.ಕೆ. ಮಿಲ್ಲಿನ ಕಾರ್ಮಿಕರ ಹೋರಾಟಗಳನ್ನು ಬೆಂಬಲಿಸುತ್ತಾ ಅವರ ಬೇಡಿಕೆಗಳನ್ನು ಕೂಡಲೆ ಬಗೆಹರಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದೆ.

ಇತಿಹಾಸದ ಪುಟಗಳಿಂದ

"ಈ ಹುಡುಗ ಭೇಟಿಯಾದರೆ ಲಾಲ್ ಸಲಾಮ್ ತಿಳಿಸಿ"

ಎರ್ನಾಕುಲಂ ಜಿಲ್ಲೆಯ ಎಡಪಿಳ್ಳಿ ಪೋಲೀಸ್ ಠಾಣೆ ಮುತ್ತಿಗೆ ಪ್ರಕರಣವು ತುಂಬಾ ಪ್ರಸಿದ್ಧವಾದುದು. ತೀವ್ರ ದಬ್ಬಾಳಿಕೆಗಳಿಗೆ ಬೇಸತ್ತ ಜನ ಪೋಲೀಸ್ ಠಾಣೆಗೆ ಮುತ್ತಿಗೆ ಹಾಕಿದ್ದರು. ಈ ಘಟನೆಯಲ್ಲಿ ಹಲವಾರು ಜನರನ್ನೊಳಗೊಂಡು ಸಬ್‌ಇನ್ಸ್‌ಪೆಕ್ಟರ್, ಪೇದೆಗಳು ಸಾವಿಗೀಡಾಗಿದ್ದರು. ಈ ಪ್ರಕರಣದಲ್ಲಿ ಭಾಗಿಯಾಗಿದ್ದಾರೆಂದು ಆರೋಪಿಸಿ ಕಾಂ. ಎಂ.ವಿ. ಲಾರೇನ್ಸ್, (ಈಗ ಎಲ್.ಡಿ.ಎಫ್: ಸಂಚಾಲಕ) ಮತ್ತು ಕಾಂ. ಇ. ಬಾಲಾನಂದನ್ (ಪಿ.ಬಿ. ಸದಸ್ಯ) ಮುಂತಾದ ಸಂಗಾತಿಗಳ ಮೇಲೆ ಮೊಕದ್ದಮೆ ಹೂಡಿ ಜೈಲಿನಲ್ಲಿ ವಿಚಾರಣಾ ಕೈದಿಗಳನ್ನಾಗಿ ಇರಿಸಲಾಗಿತ್ತು.

ಪೋಲೀಸ್ ಠಾಣೆಯೆದುರು ಒಂದು ಪುಟ್ಟ ಚಹಾದ ಅಂಗಡಿ ಇತ್ತು. ಪೋಲೀಸ್ ಠಾಣೆಗೆ ಅಲ್ಲಿಂದಲೇ ಟೀ ಸಪ್ಲೈಯಾಗುತ್ತಿತ್ತು. ಈ 'ಸಪ್ಲೈಗಾರ' ಬಾಲಕ ತುಂಬಾ ಚುರುಕು. ಹರಳು ಹುರಿದಂತೆ ಮಾತನಾಡುತ್ತಿದ್ದ, ಪಾದರಸದಂತೆ ಹರಿದಾಡುತ್ತಿದ್ದ. ಹೀಗಾಗಿ ಅಧಿಕಾರಿಗಳಿಗೂ ಪೇದೆಗಳಿಗೂ ಕೈದಿಗಳಿಗೂ ಅಚ್ಚು ಮೆಚ್ಚು. ಈ ಟೀ ಒಡನಾಟ ಸಂಗಾತಿಗಳಿಗೂ ಹಾಗೂ ಅವನ ನಡುವೆ ಉತ್ತಮ ಬಾಂಧವ್ಯ ರೂಪಿಸಿತ್ತು.

ಈ ವಿಚಾರಣಾ ಕೈದಿಗಳನ್ನು ಪಕ್ಷದ ಸಂಗಾತಿಗಳು ಭೇಟಿಯಾಗದಂತೆ ನಿರ್ಬಂಧಿಸಲಾಗಿತ್ತು. ಹೀಗಾಗಿ ಪಕ್ಷದ ತೀರ್ಮಾನ, ಸಂದೇಶಗಳು ವಿನಿಮಯವಾಗುವುದು ಅಸಾಧ್ಯವಾದ ಮಾತಾಗಿತ್ತು. ಇಂತಹ ಸ್ಥಿತಿಯಲ್ಲಿ ಟೀ ಸಪ್ಲೈಗಾರ ಬಾಲಕನೇ ಇವುಗಳ ವಾಹಕನಾದ. ಟೀ ಕೊಡಲೆಂದು ಬಂದಾಗ ಸಮಯ ಸಾಧಿಸಿ - ಚೀಟಗಳನ್ನು ಕೊಡುತ್ತಿದ್ದ. ಇದು ಬಹಳಷ್ಟು ದಿನ ಸಾಗಿತ್ತು.

ಆದರೆ ಒಮ್ಮೆ ಟೀ ಯೊಂದಿಗೆ ಚೀಟಿ ಕೊಡುವುದನ್ನು ಪೇಟೆಯೊಬ್ಬ ಗಮನಿಸಿಬಿಟ್ಟ. ಈ ಬಾಲಕನ ಮೇಲೆ ಪೋಲೀಸ್ ವಿತರಣೆ ಆರಂಭವಾಯಿತು. ಅವನ ಮೇಲಿದ್ದ ಪ್ರೀತಿಯೆಲ್ಲಾ ಪೋಲೀಸ್ ಬೂಟನಡಿ ಕೊನೆಯುಸಿರೆಳೆಯಿತು. ಎಲ್ಲಿ - ಯಾರು ಏನು - ಮುಂತಾಗಿ ಒತ್ತಾಯಿಸತೊಡಗಿದರು. ಮೌನಿಯಾದಿದ್ದಾಗ ದಣಿಯುವಷ್ಟು ಹೊಡೆದರು. ಆದರೂ ಬಾಯಿ ಬಿಡಲಿಲ್ಲ. ಇನ್ನು ಪೋಲೀಸರ ಆತಿಥ್ಯ ವಿಪರೀತಕ್ಕೇರಿತು. ಟೇಬಲ್ ಮೇಲೆ ಎರಡೂ ಕೈಗಳನ್ನಿರಿಸಿ ಬೂಟು ಕಾಲುಗಳಿಂದ ಅದುಮಿ ಪ್ರತಿಯೊಂದು ಬೆರಳಿನ ಉಗುರಿನ ಸುತ್ತಲೂ ಗುಂಡು ಸೂಜಿ ಚುಚ್ಚಿದರು. ಆದರೂ ಮಣಿಯಲಿಲ್ಲ. ಹಿಂಸೆ ಕ್ರೂರವಾದಂತೆ ಬಾಲಕ ನಿಶ್ಚಯವಾಗಿ ದೃಢ ಮನಸ್ಕನಾಗುತ್ತಿದ್ದ. ಜನತೆ ಅನುಭವಿಸುತ್ತಿದ್ದ ಯಾತನೆಗಳು ಅವನಿಗೆ ನೆನಪಾಗುತ್ತಿದ್ದವು. ತಿರುಗಿಬಿದ್ದ ಜನರ ಉಗ್ರ ಪ್ರತಿಭಟನೆಯನ್ನೂ ನೋಡಿದ್ದ. ಅಲ್ಪ ಅವಧಿಯಲ್ಲಿಯೇ ಸಂಗಾತಿಗಳು ತಿಳಿಸಿದ ಈ ವ್ಯವಸೆ ಆತನಿಗೆ ಮತ್ತೆ ಮತ್ತೆ ಕಣ್ಣ ಮುಂದೆ ಬಂತು. ತನ್ನ ವರ್ಗಕ್ಕೆ ದುಡಿಯುವ ಜನತೆಗೆ ತಾನು ನಿಷ್ಠ.- ಅವರ ಪಕ್ಷಪಾತಿ ಮಾತ್ರ.

ಈ ಅಚಲ ವರ್ಗ ನಿಷ್ಠೆಯೆದುರು ಪೋಲೀಸರು ಸೋತರು. ಬಾಲಕ ಅಲ್ಲಿಂದ ಎಲ್ಲಿಗೋ ಹೊರಟು ಹೋದ. ಅನಾಮಧೇಯ ಬಾಲಕ ಬೆಳೆದು ಇಂದು ದೊಡ್ಡವನಾಗಿದ್ದಾನೆ. ಬಹುಶಃ ನಮ್ಮ ಮಧ್ಯೆ ಇಲ್ಲೇಲೋ ಇರಬೇಕು. ಆತನನ್ನು ಗುರುತು ಹಿಡಿಯುವುದೇನೂ ಕಷ್ಟವಾಗಲಿಕ್ಕಿಲ್ಲ. ಅವನ ಆಕಾರ ಬಣ್ಣ ಮಾತು ಎಲ್ಲಾ ನಮ್ಮ ನಿಮ್ಮಂತೆಯೇ ಆದರೆ ಪೋಲೀಸರ ಚಿತ್ರ ಹಿಂಸೆಯಿಂದಾಗಿ ಆತನ ಎರಡೂ ಕೈಗಳ ಬೆರಳು ಇಂದಿಗೂ ಊದಿಕೊಂಡು ವಿಕೃತಗೊಂಡಿದೆ. ಆತ ಭೇಟಿಯಾದರೆ ತಪ್ಪದೇ ನಮ್ಮ "ಲಾಲ್ ಸಲಾಮ್" ತಿಳಿಸಿ.

ಸಂಗ್ರಹ ಅನುವಾದ:
ಎಸ್.ವೈ. ಗುರುಶಾಂತ್
ಇ.ಕೆ.ಎನ್. ರಾಜನ್

ಕಾಫಿ ಕ್ಯೂರಿಂಗ್ ಕಾರ್ಮಿಕರ ವ್ಯಾಪಕ ಚಳುವಳಿಗೆ ಕರೆ

ಕಾಫಿ ಕ್ಯೂರಿಂಗ್ ಕಾರ್ಮಿಕರ ಚಳುವಳಿಯು ವ್ಯಾಪಕವಾಗಿ ನಡೆಯ ಬೇಕಾಗಿರುವುದರಿಂದ ಎಲ್ಲಾ ಕಾಫಿ ಕ್ಯೂರಿಂಗ್ ವರ್ಕ್ಸ್‌ಗಳಲ್ಲಿರುವ ಕಾರ್ಮಿಕರ ಐಕ್ಯತೆಯನ್ನು ಬೆಸೆಯುವತ್ತ ಮತ್ತು ವಿಶಾಲವಾದ ಚಳುವಳಿಯನ್ನು ನಡೆಸುವತ್ತ ವಿಚಾರ ಮಾಡಲಿ ಎಂದು ಸಿ.ಪಿ.ಐ(ಎಂ) ರಾಜ್ಯ ಸೆಕ್ರೆಟಾರಿಯೆಟ್ ಸದಸ್ಯ ಹಾಗೂ ರಾಜ್ಯ ಸಿ.ಐ.ಟಿ.ಯು. ಮುಖಂಡ ಕಾಂ. ಸಿ. ನಂಜುಂಡಪ್ಪ ಕರೆ ನೀಡುತ್ತಾರೆ. ಅವರು ಏಪ್ರಿಲ್ ೨೨ ರಂದು ಹಾಸನದಲ್ಲಿ ಕಾಫಿ ಕ್ಯೂರಿಂಗ್ ಕಾರ್ಮಿಕರ ಕರ್ನಾಟಕ ರಾಜ್ಯ ಸಮಾವೇಶವನ್ನು ಉದ್ಘಾಟಿಸುತ್ತಾ ಮಾತನಾಡುತ್ತಿದ್ದರು.

ಭಾರತಕ್ಕೆ ಸ್ವಾತಂತ್ರ ಬಂದಾಗಲಾಯ್ತು ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷವು ಅನುಸರಿಸಿದ ಆರ್ಥಿಕ ನೀತಿಯಿಂದ ದೇಶದಲ್ಲಿ ಎಲ್ಲಾ ಸಾಮಗ್ರಿಗಳ, ಸರಕುಗಳ ಬೆಲೆಗಳು ಹೆಚ್ಚಾಗುತ್ತಿವೆ. ದಿನ ಬಳಕೆಯ ವಸ್ತುಗಳ ಬೆಲೆಯೇರಿಕೆಯಿಂದ ನಿಗದಿಯಾದ ಆದಾಯವಿರುವ ಕಾರ್ಮಿಕರ, ನೌಕರರ ಕೊಳ್ಳುವ ಶಕ್ತಿಯು ಕಡಿಮೆಯಾಗಿ ಅವರ ಜೀವನ ಮಟ್ಟ ಕೆಳಗಿಳಿಯುತ್ತಿದೆ. ಒಂದು ಕಡೆ ನಿರುದ್ಯೋಗ ಮತ್ತು ಇನ್ನೊಂದು ಕಡೆ ಬೆಲೆಯೇರಿಕೆಗಳಿಂದ ಕಡಿಮೆ ಕೂಲಿಯ ದರಗಳಿರುವ ಕೈಗಾರಿಕೆಗಳ ಕಾರ್ಮಿಕರು ನರಳುತ್ತಿದ್ದಾರೆ ಎಂದು ಅವರು ವಿವರಿಸಿದರು.

ಕಾಫಿ ಪ್ಲಾಂಟೇಶನ್ ಕೈಗಾರಿಕೆ ಸಕಾಲದಲ್ಲಿ ಮಳೆ ಅಗತ್ಯವಿರುವ ಕೈಗಾರಿಕೆ. ಕಳೆದ ವರ್ಷ ಸಕಾಲಿಕ ಮಳೆಯಾಗದೆ ಕಾಫಿಯ ಉತ್ಪನ್ನ ಕಡಿಮೆಯಾಗಿ ಕಾಫಿ ಕ್ಯೂರಿಂಗ್ ಸಂಸ್ಥೆಗಳಿಗೆ ಹಿಂದಿನ ವರ್ಷಗಳಲ್ಲಿ ಬರುತ್ತಿದ್ದಷ್ಟು ಕಾಫಿಯು ಈ ವರ್ಷ ಬಾರದೆ ಕಾಫಿ ಕ್ಯೂರಿಂಗ್ ಕಾರ್ಮಿಕರ ಮುಂದಿರುವ ಸಮಸ್ಯೆಗಳು ಮತ್ತೂ ಗಂಭೀರವಾಗಿವೆ. ಇದನ್ನು ಪರಿಶೀಲಿಸಿದ ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿಯ ಇತ್ತೀಚೆಗೆ ಮೈಸೂರಿನಲ್ಲಿ ನಡೆದ ಸಭೆ ಕಾಫಿ ಕ್ಯೂರಿಂಗ್ ಕಾರ್ಮಿಕರ ಕರ್ನಾಟಕ ರಾಜ್ಯ ಸಮಾವೇಶವನ್ನು ಹಾಸನದಲ್ಲಿ ನಡೆಸಲು ತೀರ್ಮಾನಿಸಿತು ಎಂದು ಕಾಂ. ಸಿ.ಎನ್. ಹೇಳಿದರು.

ದೇಶದಲ್ಲಿ ಕಾಫಿ ಉದ್ಯಮ ಮುಖ್ಯವಾಗಿ ಕರ್ನಾಟಕ, ತಮಿಳುನಾಡು, ಕೇರಳದಲ್ಲಿವೆ. ಒಟ್ಟು ೪೪ ಕಾಫಿ ಕ್ಯೂರಿಂಗ್ ಸಂಸ್ಥೆಗಳಲ್ಲಿ ಸುಮಾರು ೭ ಸಾವಿರ ಕಾರ್ಮಿಕರಿದ್ದಾರೆ. ಇವುಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚು ಸಂಸ್ಥೆಗಳು ಹಾಸನ, ಚಿಕ್ಕಮಗಳೂರು, ಕೊಡಗು ದಕ್ಷಿಣ ಕನ್ನಡ, ಮೈಸೂರು ಜಿಲ್ಲೆಗಳಲ್ಲಿವೆ.

ಕರ್ನಾಟಕ ದೇಶದ ಕಾರ್ಮಿಕ ವರ್ಗದ ಭಾಗವಾಗಿರುವ ಕಾಫಿ ಕ್ಯೂರಿಂಗ್ ಕಾರ್ಮಿಕರ ಬೇಡಿಕೆಗಳು ರಾಜ್ಯದ, ದೇಶದ ಕಾರ್ಮಿಕ ವರ್ಗದ ಬೇಡಿಕೆಗಳಾಗಬೇಕು ಎಂದು ಸಿ.ಎನ್. ಹೇಳಿದರು.

ಹೊಸ ರಾಷ್ಟ್ರೀಯ ರಂಗ ಸರ್ಕಾರದ ಚೊಚ್ಚಲು ಬಜೆಟ್ಟಿನಲ್ಲಿ ವ್ಯಕ್ತವಾದಂತೆ ಹಿಂದಿನ ಸರ್ಕಾರದ ಆರ್ಥಿಕ ನೀತಿಯನ್ನು ಸಂಪೂರ್ಣವಾಗಿ ಬದಲಿಸದೆ ಹಿಂದಿನ ದಾರಿಯಲ್ಲೇ ಹೋಗಲೆತ್ನಿಸುತ್ತಿದೆ. ಕರ್ನಾಟಕದ ಕಾಂಗ್ರೆಸ್(ಐ) ಸರಕಾರ ಹಲವಾರು ಕಾಯಿದೆಗಳ ಪ್ರಕಾರ ಕಾರ್ಮಿಕರಿಗೆ ಸಿಗಬೇಕಾದ ಸೌಲಭ್ಯಗಳು ಹಾಗೂ ರಕ್ಷಣೆ ಒದಗಿಸುವಲ್ಲಿ ವಿಫಲವಾಗಿದೆ ಎಂದು ಅವರು ವಿವರಿಸಿದರು. ಕಾರ್ಮಿಕ ವಿವಾದಗಳಲ್ಲಿ ಕರ್ನಾಟಕದ ಕಾಂಗ್ರೆಸ್(ಐ) ಸರಕಾರದ ಪೋಲೀಸ್ ನೀತಿಯ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಹಾಗೂ ಕೇರಳದ ಎಡ ಪ್ರಜಾಪ್ರಭುತ್ವ ಸರಕಾರದ ಪೋಲೀಸ್ ನೀತಿ ಹೇಗೆ ಭಿನ್ನವಾಗಿದೆ ಎಂದು ವಿವರಿಸುತ್ತಾ ಅವರು ಆ ರಾಜ್ಯಗಳಲ್ಲಿರುವ ಸರ್ಕಾರಗಳು ಇಡೀ ದೇಶದ ದುಡಿಯುವ ಜನತೆಯ ಸರ್ಕಾರಗಳು ಎಂದರು. ಕಾರ್ಮಿಕ ಸಂಘಗಳು ಎಡ ಸರ್ಕಾರಗಳನ್ನು ಬೆಂಬಲಿಸಬೇಕು. ರಾಷ್ಟ್ರೀಯ ರಂಗ ಸರ್ಕಾರದ ಆರ್ಥಿಕ ನೀತಿ ಬದಲಾವಣೆಗೆ ಒತ್ತಾಯಿಸಬೇಕು. ಕರ್ನಾಟಕದ ಕಾಂಗ್ರೆಸ್ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಬೇಕು. ಎಂದು ಕರೆನೀಡಿದರು. ಜತೆಗೆ ಸಣ್ಣ ಕಾಫಿ ಬೆಳೆಗಾರರ ಬೇಡಿಕೆಗಳಿಗೆ ಬೆಂಬಲ ಕೊಡಬೇಕೆಂದರು.

ಕನಿಷ್ಟ ಕೂಲಿ ಹೋರಾಟಕ್ಕೆ ಬೆಂಬಲ

ಕನಿಷ್ಟ ಕೂಲಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕೈಗಾರಿಕೆಗಳ ಕಾರ್ಮಿಕರಿಗೆ ಕನಿಷ್ಟ ಕೂಲಿ ಪರಿಷ್ಕರಿಸಲು ಜೂನ್ ತಿಂಗಳಲ್ಲಿ ನಡೆಯಲಿರುವ ರಾಜ್ಯವ್ಯಾಪಿ ಹೋರಾಟದ ಅಂಗವಾಗಿ ಮೇ ತಿಂಗಳಲ್ಲಿ ಪ್ರದೇಶ, ತಾಲ್ಲೂಕು, ಜಿಲ್ಲಾವಾರು ಸಮಾವೇಶಗಳನ್ನು ನಡೆಸಲು, ಪ್ರಚಾರ ಪ್ರಕ್ಷೋಭೆಗಳಲ್ಲಿ ಸಕ್ರಿಯವಾಗಿ ಪಾಲುಗೊಳ್ಳಲು, 'ಜೈಲ್ ಭರೋ' ಕಾರ್ಯಕ್ರಮ ಯಶಸ್ವಿಗೊಳಿಸಲು ಸೌತ್ ಕೆನರಾ ರೈಲ್ವೆ ವರ್ಕ್ಸ್ ಯೂನಿಯನ್ ಎಲ್ಲಾ ಹಂಚಿನ ಕಾರ್ಮಿಕರಿಗೆ ಕರೆ ನೀಡಿದೆ. ಅದೇ ರೀತಿ ಅನಿರ್ದಿಷ್ಟ ಕಾಲದ ಮುಷ್ಕರದಲ್ಲಿರುವ ಧಾರವಾಡ, ದಾಂಡೇಲಿ, ಹಂಗಾರಕಟ್ಟೆ, ನೆಟ್ಟಾಣದ ಪ್ಲೈವುಡ್ ಕಾರ್ಮಿಕರ ಹೋರಾಟಕ್ಕೆ, ವಾರದಲ್ಲಿ ಆರು ದಿನ ಕೆಲಸಕ್ಕಾಗಿ, ಪರಿಹಾರಕ್ಕಾಗಿ ನಡೆಯುತ್ತಿರುವ ಬೀಡಿ ಕಾರ್ಮಿಕರ ಹೋರಾಟಕ್ಕೆ ಸಂಘ ತನ್ನ ಬೆಂಬಲ ವ್ಯಕ್ತಪಡಿಸಿದೆ. ಯೂನಿಯನ್‌ನ ಕಾರ್ಯಕಾರಿ ಸಮಿತಿಯು ಇತ್ತೀಚಿನ ಸಭೆಯಲ್ಲಿ ಇದನ್ನು ನಿರ್ಧರಿಸಲಾಯಿತು ಎಂದು ಪ್ರಧಾನ ಕಾರ್ಯದರ್ಶಿ ಕೆ.ಶಂಕರ್ ತಿಳಿಸಿದ್ದಾರೆ.

ತುಟ್ಟಿ ಭತ್ಯೆ ಮತ್ತಿತರ ಕಾನೂನು ರೀತ್ಯಾ ಸವಲತ್ತುಗಳಿಗಾಗಿ ಒತ್ತಾಯಿಸಿದಾಗ ಫೆಬ್ರವರಿ ೧೨ ರಿಂದ ಉತ್ತರ ಕನ್ನಡ ಜಿಲ್ಲೆಯ ಶರಾವತಿ ಹಂಚಿನಕಾರ್ಖಾನೆಯ ಕಾರ್ಮಿಕರಿಗೆ ಕೆಲಸ ನಿರಾಕರಿಸಿರುವುದನ್ನು ಸಭೆ ಖಂಡಿಸಿತು. ತಕ್ಷಣವೇ ಎಲ್ಲರಿಗೂ ಕೆಲಸ ಕೊಟ್ಟು ಕಾನೂನು ರೀತ್ಯಾ ಸವಲತ್ತು ಒದಗಿಸಬೇಕೆಂದು ಒತ್ತಾಯಿಸಿತು.

ಬೀಡಿ ಕಾರ್ಮಿಕರ ಧರಣಿ

ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತದಿಂದ ಬಂದಿದ್ದ ನೂರಾರು ಬೀಡಿ ಕಾರ್ಮಿಕರು ಮಂಗಳೂರಿನಲ್ಲಿ ಲೇಬರ್ ಕಮಿಷನರ್ ಕಚೇರಿ ಮುಂದೆ ವಾರಕ್ಕೆ ಆರು ದಿನ ಕೆಲಸಕ್ಕೆ ಆಗ್ರಹಿಸಿ ಏಪ್ರಿಲ್ ೧೭ ರಂದು ಧರಣಿ ಸತ್ಯಾಗ್ರಹ ನಡೆಸಿದರು. ಪರಿಣಾಮವಾಗಿ ಏಪ್ರಿಲ್ ೨೩ ರಂದು ಮಾಲೀಕರೊಂದಿಗೆ ಸಿ.ಐ.ಟಿ.ಯು ಮುಖಂಡರೊಂದಿಗೆ ಮಾತುಕತೆ ವ್ಯವಸ್ಥೆ ಮಾಡುವುದಾಗಿ ಲೇಬರ್ ಕಮಿಷನರ್ ಭರವಸೆ ನೀಡಿದರು. ಕಾಂ. ಕೆ.ಆರ್. ಶ್ರೀಯಾನ್ ಹಾಗೂ ಕಾಂ. ಲೋಕಯ್ಯಣ್ಣ ಧರಣಿ ಸತ್ಯಾಗ್ರಹಿಗಳನ್ನು ಉದ್ದೇಶಿಸಿ ಮಾತನಾಡಿದರು. ಕಾಂ. ಬಾಲಕೃಷ್ಣ ಸ್ವಾಗತಿಸಿದರು.

ತುಮಕೂರಿನಲ್ಲಿ

ಸಿ.ಐ.ಟಿ.ಯು ರಾಜ್ಯ ಸಮಿತಿಯ ಕರೆಯ ಮೇರೆಗೆ ತುಮಕೂರಿನಲ್ಲಿ ಏಪ್ರಿಲ್ ೧೭ ರಂದು ಒಂದು ಸಾವಿರಕ್ಕೂ ಹೆಚ್ಚು ಬೀಡಿ ಕಾರ್ಮಿಕರು ಸಹಿ ಮಾಡಿದ ಮನವಿ ಪತ್ರವನ್ನು ತುಮಕೂರು ಜಿಲ್ಲಾ ಕಾರ್ಮಿಕ ಅಧಿಕಾರಿಗಳಿಗೆ ಸಲ್ಲಿಸಲಾಯಿತು. ಇದರಲ್ಲಿ ಗಣೇಶ ಬೀಡಿ ಮಾಲಿಕರಿಗೆ ಸೇರಿದ ಜ್ಯೋತಿ ಹೋಂ ಇಂಡಸ್ಟ್ರೀಸ್‌ನ ಮಾಲಿಕರು ಬೀಡಿ ಕಾರ್ಮಿಕರಿಗೆ ಕನಿಷ್ಟ ಬೀಡಿ ಕೆಲಸ ಒದಗಿಸುವ ಅಥವಾ ಫಾಲ್‌ಬ್ಯಾಕ್ ವೇಜಸ್ ಕೊಡುವ ೧೯೭೪ರ ಒಪ್ಪಂದವನ್ನು ಉಲ್ಲಂಘಿಸುತ್ತಿರುವ ಬಗ್ಗೆ ಮನವಿ ಪತ್ರದಲ್ಲಿ ತಿಳಿಸಲಾಗಿತ್ತು. ಮಾಲಕರು ತಕ್ಷಣ ದಿನಕ್ಕೆ ೮೦೦ ರಂತೆ ೪,೮೦೦ ಬೀಡಿಗಳ ಕನಿಷ್ಟ ಕೆಲಸ ಅಥವಾ ಕನಿಷ್ಟ ಕೂಲಿ ಕಾನೂನಿನ ಪ್ರಕಾರ ಫಾಲ್‌ಬ್ಯಾಕ್ ವೇಜನ್ನಾದರೂ ಕೊಡಿಸಿಕೊಡಬೇಕೆಂದು ಕಾರ್ಮಿಕ ಆಯುಕ್ತರನ್ನು ವಿನಂತಿಸಿಕೊಳ್ಳಲಾಯಿತು.

ರಾಜ್ಯ ಸರಕಾರದ ಧೋರಣೆಯಿಂದ ಸಾರಿಗೆ ಉದ್ದಿಮೆ ಗೊಂದಲಮಯ

ಒಂದು ಕಡೆ ಕೆ.ಎಸ್.ಆರ್.ಟಿ.ಸಿ.ಯನ್ನು ಖಾಸಗೀಕರಣಗೊಳಿಸುವ ಮಾತನ್ನಾಡುತ್ತಾ ಇನ್ನೊಂದೆಡೆ ಖಾಸಗೀ ವಲಯದಲ್ಲಿ ಸಿಕ್ಕಾಪಟ್ಟೆ ಬಸ್‌ಪರ್ಮಿಟ್ ನೀಡುತ್ತಿರುವ ರಾಜ್ಯ ಸರಕಾರದ ಸಾರಿಗೆ ನೀತಿಯನ್ನು ಮೋಟಾರ್ ಟ್ರಾನ್ಸ್‌ಪೋರ್ಟ್, ಮತ್ತು ಇಂಜನಿಯರಿಂಗ್ ವರ್ಕರ್ಸ್ ಯೂನಿಯನ್ ಖಂಡಿಸಿದೆ. ಇದರಿಂದ ಒಂದೆಡೆ ರಾಜ್ಯಸರ್ಕಾರ ಪಟ್ಟಭದ್ರ ಹಿತಾಸಕ್ತಿಗಳ ಕೈಗೊಂಬೆಯಂತಾದರೆ ಖಾಸಗೀ ವಲಯದಲ್ಲಿ ಅನಾರೋಗ್ಯಕರ ಹಾಗು ಅಪಾಯಕಾರಿ ಸ್ಪರ್ಧೆಯನ್ನು ಉಂಟುಮಾಡಿ ಖಾಸಗೀ ಮಾಲಕರ ಹಾಗೂ ನೌಕರರ ಭದ್ರತೆಗೆ ಅಪಾಯ ತಂದು ಸಾರಿಗೆ ಉದ್ದಿಮೆಯನ್ನು ಗೊಂದಲಮಯಗೊಳಿಸಿದೆ. ಅದನ್ನು ಅಂಚಿನತ್ತ ತಳ್ಳುತ್ತಿದೆ ಎಂದು ಯೂನಿಯನ್ ಅಧ್ಯಕ್ಷ ಕೆ.ಮೊಸ್ಸು [illegible] ವ್ಯಕ್ತಪಡಿಸಿದ್ದಾರೆ. ಉದ್ಯಮದ, ನೌಕರರ ಸ್ಥಿತಿಗತಿಗಳ ಸ್ಥೈರ್ಯ ಗಮನಿಸಿದ ಸಾರಿಗೆ [illegible]ರರು ಮಹಟಬಂದಂತೆ ಪರವಾನಿಗೆ ನೀಡುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ.

ಖಾಸಗೀ ರೂಟುಗಳನ್ನು ರಾಷ್ಟ್ರೀಕರಿಸಬೇಕು, ಕೆ.ಎಸ್.ಆರ್.ಟಿ.ಸಿ.ಯ ಖಾಸಗೀಕರಣ ನಿಲ್ಲಿಸಬೇಕು, ಬೇಕಾಬಿಟ್ಟಿ ಪರವಾನಿಗೆ ನೀಡುವುದನ್ನು ನಿಲ್ಲಿಸಬೇಕು ಇವೇ ಮೊದಲಾದ ಬೇಡಿಕೆಗಳನ್ನು ಮುಂದಿಟ್ಟು ರಾಜ್ಯದ ಇತರ ಸಾರಿಗೆ ಸಂಘಗಳೊಡನೆ ಸೇರಿ ರಾಜ್ಯ ಮಟ್ಟದ ಚಳುವಳಿ ನಡೆಸಲು ಸಂಘದ ಪದಾಧಿಕಾರಿಗಳ ಸಭೆಯಲ್ಲಿ ನಿರ್ಧರಿಸಲಾಯಿತು.

ಕಾಂಗ್ರೆಸ್ ದೌರ್ಜನ್ಯದ ವಿರುದ್ಧ ಪ್ರತಿಭಟನೆ

ಬಳ್ಳಾರಿ ಜಿಲ್ಲೆಯ ಶಿರುಗುಪ್ಪದಲ್ಲಿ ಸಿ.ಪಿ.ಐ.(ಎಂ)ನ ನೂರಾರು ಕಾರ್ಯಕರ್ತರು ಏಪ್ರಿಲ್ ೧೭ ರಂದು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಪ್ರತಿಭಟನಾ ಮೆರವಣಿಗೆಯನ್ನು ನಡೆಸಿದರು. ಏಪ್ರಿಲ್ ೨೦ ರಂದು ಕೆ.ಬಸವನಗೌಡ, ಹೆಚ್. ರಾಮಾಂಜನೇಯ ಮತ್ತಿತರ ಕಾರ್ಯಕರ್ತರ ಮೇಲೆ ಕಾಂಗ್ರೆಸ್ ಗೂಂಡಾಗಳ ನಡೆಸಿದ ಹಲ್ಲೆಯನ್ನು ಪ್ರತಿಭಟಿಸಿ ಈ ಮೆರವಣಿಗೆ ನಡೆಯಿತು. ಸ್ಥಳೀಯ ಪುರಸಭೆ ವಸೂಲಿಯನ್ನು ತಾನೇ ಮಾಡದೆ ಕಾಂಟ್ರಾಕ್ಟರುಗಳಿಗೆ ವಹಿಸಿದೆ. ಕಾಂಟ್ರಾಕ್ಟರುಗಳು ನಿಗದಿತ ದರಕ್ಕಿಂತ ಹೆಚ್ಚು ವಸೂಲಿ ಮಾಡುತ್ತಿರುವುದರ ವಿರುದ್ಧ ಏಪ್ರಿಲ್ ೨ ರಂದು ಪುರಸಭೆಗೆ ಪ್ರತಿಭಟನೆ ಸಲ್ಲಿಸಿ ಮನವಿಪತ್ರ ಅರ್ಪಿಸಲು ಡಿ.ವೈ.ಎಫ್.ಐ. ಘಟಕ ರೂಪಿಸಿದ ಕಾರ್ಯಕ್ರಮದ ಅಂಗವಾಗಿ ಏಪ್ರಿಲ್ ೧ ರಂದು ಪ್ರಚಾರದಲ್ಲಿ ತೊಡಗಿದ್ದ ಕಾಂ. ಬಸವನಗೌಡರ ಮೇಲೆ ಕಾಂಗ್ರೆಸ್ ಗೂಂಡಾಗಳು ಹಠಾತ್ತಾಗಿ ಎರಗಿದರು. ತಪ್ಪಿಸಿಕೊಂಡ ಬಸವನಗೌಡರು ಪೋಲೀಸ್ ಸ್ಟೇಶನ್ನಿಗೆ ಹೋಗಿ ದೂರಿತ್ತರೂ ಪೋಲೀಸರೆದುರೇ ಗೂಂಡಾಗಳು ಅವಾಚ್ಯ ಶಬ್ದಗಳಿಂದ ಬೈದರು. ತಕ್ಷಣ ೨೦೦ ಸಿ.ಐ.ಟಿ.ಯು ಡಿ.ವೈ.ಎಫ್.ಐ. ಎಲ್ಲಾ ಒಟ್ಟು ಸೇರಿ ಈ ಗೂಂಡಾಧಾಳಿಯನ್ನು ಪ್ರತಿಭಟಿಸಿದರು. ಪೋಲೀಸರು ಲಾಠಿ ಪ್ರಹಾರ ನಡೆಸಿದರು. ಇನ್ನೊಬ್ಬ ಕಾರ್ಯಕರ್ತ ಕಾಂ.ರಾಮಾಂಜನೇಯರವರ ಮೇಲೆ ಕಾಂಗ್ರೆಸ್ ಗೂಂಡಾಗಳು ಹಲ್ಲೆ ನಡೆಸಿದರು.

ಈ ಘಟನೆಯಲ್ಲಿ ಕಾಂಟ್ರಾಕ್ಟ್‌ದಾರರು, ಕಾಂಗ್ರೆಸ್ಸಿನವರೊಂದಿಗೆ ಪೋಲೀಸರೇ ಶಾಮೀಲಾದ ಸಿ.ಪಿ.ಐ.(ಎಂ)ನ ಕಾರ್ಯಕರ್ತರ ಮೇಲೆ ಮೊಕದ್ದಮೆ ಹೂಡಿದುದನ್ನು ಖಂಡಿಸಿ ಜಿಲ್ಲಾ ಕಾರ್ಯದರ್ಶಿ ಎಸ್.ಪ್ರಸನ್ನ ಕುಮಾರ್ ರವರ ನೇತೃತ್ವದಲ್ಲಿ ಏಪ್ರಿಲ್ ೧೭ ರಿಂದು ಪ್ರತಿಭಟನೆ ನಡೆಯಿತು. ಕಾಂಗ್ರೆಸ್ ಸರ್ಕಾರದ ದಬ್ಬಾಳಿಕೆಯನ್ನು ಖಂಡಿಸುತ್ತಾ, ದಬ್ಬಾಳಿಕೆಯು ಹೀಗೇ ಮುಂದುವರಿದರೆ ಹಿಂದೆ ಗುಂಡೂರಾಯರಿಗೆ ಕೊಟ್ಟ ಉತ್ತರವನ್ನು ನೆನಪಿಸಬೇಕಾಗುತ್ತದೆ ಎಂದು ಅವರು ಸರಕಾರವನ್ನು ಎಚ್ಚರಿಸಿದರು.

ಇದೇ ಸಂದರ್ಭದಲ್ಲಿ ಕೇಂದ್ರ ಮತ್ತು ರಾಜ್ಯದ ಮುಂಗಡಪತ್ರಗಳ ತೆರಿಗೆ ಪ್ರಸ್ತಾವಗಳನ್ನು ಹಿಂತೆಗೆದುಕೊಳ್ಳಬೇಕೆಂದು ತಹಸಿಲ್ದಾರರಿಗೆ ಮನವಿ ಸಲ್ಲಿಸಲಾಯಿತು. ಸ್ಥಳೀಯ ಸಮಸ್ಯೆಗಳ ಪರಿಹಾರಕ್ಕೂ ಪತ್ರದಲ್ಲಿ ಒತ್ತಾಯಿಸಲಾಗಿತ್ತು.

ಹೊಸ ಪೇಟೆಯಲ್ಲಿ ಸಭೆ

ಏಪ್ರಿಲ್ ೮ರಂದು ಹೊಸಪೇಟೆಯಲ್ಲಿ ಡಿ.ವೈ.ಎಫ್.ಐ. ತಾಲ್ಲೂಕು ಮಟ್ಟದ ಸರ್ವಸದಸ್ಯರ ಸಭೆ ನಡೆಯಿತು. ರಾಜ್ಯ ಕಾರ್ಯದರ್ಶಿ ಎಸ್. ಶಿವರಾಂ, ಜಿಲ್ಲಾ ಅಧ್ಯಕ್ಷ ಜಂಬಯ್ಯ ನಾಯಕ್, ಎಸ್.ಎಫ್.ಐ. ಮುಖಂಡ ಎಲ್. ಮಂಜುನಾಥ್, ಚಂದ್ರಬಾಬು, ಮಹೇಶ್ ಮಾಬಿಲ್ ಸಭೆಯನ್ನುದ್ದೇಶಿಸಿ ಮಾತನಾಡಿದರು. ಕೆ. ಸೋಮಯ್ಯನವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಗೋಪಾಲ ಸ್ವಾಮಿ ವಂದಿಸಿದರು. [illegible]

ಧೀರ ಮಹಿಳೆಯರಿಗೆ ಒಂದು ಸ್ಮಾರಕ

ಸೋವಿಯೆತ್ ಮಹಿಳೆ ಇಂದು ಉನ್ನತ ಸಾಮಾಜಿಕ ಸ್ಥಾನಮಾನಗಳಿಸಿದ್ದಾಳೆ. ಒಂದು ಮಂತ್ರಿ ಸ್ಥಾನದಲ್ಲಾಗಲಿ, ಪಕ್ಷದ ಪ್ರಾದೇಶಿಕ ಸಮಿತಿಯಲ್ಲಾಗಲಿ, ಒಂದು ಗಣತಂತ್ರದ ಅಥವಾ ಸ್ವಾಯತ್ತ ಪ್ರದೇಶದ ಸುಪ್ರೀಂ ಸೋವಿಯೆತ್ ಅಥವಾ ಸಂಸತ್ತಿನಲ್ಲಿ ಮಹಿಳೆಯನ್ನು ಕಾಣುವುದು ಈಗ ಸಾಮಾನ್ಯ ಸಂಗತಿ ಆದರೆ ಇದು ಸದಾ ಹೀಗೇ ಇರಲಿಲ್ಲ. ೧೯೧೭ರ ಕ್ರಾಂತಿ ಮಹಿಳೆಯರಿಗೆ ಎಲ್ಲಾ ವಲಯಗಳಲ್ಲಿ ಸಮಾನ ಹಕ್ಕು ನೀಡಿತು. ಹೊಸ ಸೋವಿಯೆತ್ ದೇಶದಲ್ಲಿ ಸಾರ್ವಜನಿಕ ಚಟುವಟಿಕೆಗಳಲ್ಲಿ ತೊಡಗಿ ತಮ್ಮ ಹಕ್ಕುಗಳನ್ನು ಸಾಧಿಸುವ ಅವಕಾಶ ಅವರಿಗೆ ದೊರೆಯಿತು.

ಆದರೆ ಶತಮಾನಗಳ ಪೂರ್ವಾಗ್ರಹಗಳನ್ನು ಮೀರುವುದು ಅಷ್ಟು ಸುಲಭವಾಗಿರಲಿಲ್ಲ, ವಿಶೇಷವಾಗಿ ಪೂರ್ವ ಸೋವಿಯೆತ್‌ನಲ್ಲಿ.

೧೯೨೦ ರಲ್ಲಿ ಒಂದು ವಿಶಾಲ ಮಹಿಳೋದ್ಧಾರ ಆಂದೋಲನ ಮಧ್ಯ ಏಶಿಯಾದಲ್ಲಿ ಆರಂಭವಾಯಿತು. ಅದರ ಹೆಸರು 'ಖುದ್‌ಝುಮ್'. ಮಹಿಳೆಯರು ತಮ್ಮ ಕೀಳು ಸ್ಥಾನಮಾನದ ಕುರುಹಾದ ಬುರ್ಖಾವನ್ನು ಕಿತ್ತು ಬೆಂಕಿಗೆಸೆಯುವ ಆಂದೋಲನವದು. ಮೊದಲಿಗೆ ಈ ಧೈರ್ಯ ತೋರಲು ಸಾಧ್ಯವಾದದ್ದು ಕೆಲವೇ ಮಹಿಳೆಯರಿಗೆ. ಮಹಿಳೆಯರನ್ನು ಕುರುಡು ಧರ್ಮಾಭಿಮಾನಿಗಳು ಅಮಾನುಷವಾಗಿ ಕೊಂದರು. ಆದರೂ ೧೯೨೮ರ ವೇಳೆಗೆ ಆಗಲೇ ಬುರ್ಖಾ ಕಿತ್ತೆಸೆದ ೧ ಲಕ್ಷ ಮಹಿಳೆಯರಿದ್ದರು. ಮಹಿಳೆಯ ರಕ್ಷ [illegible] ನಂಬಿಕೆಗಳು, ಕಂದಾಚಾರಗಳ ವಿರುದ್ಧ ಎಲ್ಲಾ ರಂಗಗಳಲ್ಲಿ, ಕೆಲಸದ, ಅಧ್ಯಯನದ ಹಕ್ಕು ಪಡೆಯಲು ದೃಢ ಮನಸ್ಸಿನಿಂದ ಹೋರಾಡಿದ ಮಹಿಳೆಯರು ಇವರು.

ಇತ್ತೀಚೆಗೆ ಉಝ್ಬೇಕಿಸ್ತಾನದ ರಾಜಧಾನಿ ತಾಷ್ಕೆಂಟಿನಲ್ಲಿ "ಪೌರ್ವಾತ್ಯದ ಉದ್ಧಾರ ಹೊಂದಿದ ಮಹಿಳೆ" ಎಂಬ ಒಂದು ಬ್ರಾನ್ಸ್ ಸ್ಮಾರಕವನ್ನು ಸ್ಥಾಪಿಸಲಾಯಿತು. ಆರು ದಶಕಗಳ ಹಿಂದೆ ಮೊದಲ ಬುರ್ಖಾವನ್ನು ಬೆಂಕಿಗೆಸೆದ ಸ್ಥಳದಲ್ಲೇ ಇದನ್ನು ಸ್ಥಾಪಿಸಲಾಗಿದೆ.



"ಖುದ್‌ಝುಮ್" ಆಂದೋಲನದ ಪ್ರತೀಕ

೫೦ ದಿನಗಳ ತೀವ್ರ ಹೋರಾಟದ ನಂತರ ಪ್ರಜಾಪ್ರಭುತ್ವದ ಮರುಸ್ಥಾಪನೆಯಲ್ಲಿ ಯಶಸ್ವಿಯಾದ ನೇಪಾಳೀ ಜನತೆ ಈಗ ಅದನ್ನು ಪ್ರತಿಗಾಮಿ ಶಕ್ತಿಗಳಿಂದ ರಕ್ಷಿಸಲು ಅಷ್ಟೇ ಜಾಗರೂಕರಾಗಿರಬೇಕು. ಏಕೆಂದರೆ ತಮ್ಮ ಹಳೆಯ ಸೌಲಭ್ಯಗಳನ್ನು ಸುಲಭವಾಗಿ ಬಿಟ್ಟು ಕೊಡಲು ಹಳೆಯ ಪಂಚಾಯತಿಗಳು ದೊರೆ ಬೀರೆಂದ್ರ ಬಯಸುತ್ತಿಲ್ಲ ಎಂಬುದು ಕಂಡು ಬಂದಿದೆ ಎನ್ನುತ್ತಾರೆ ಕಾಂ. ಹರ್ಕಿಶನ್‌ಸಿಂಗ್ ಸುರ್ಜಿತ್.

ಫೆಬ್ರುವರಿ ೧೮ ರಂದು ಆರಂಭಿಸಿದ ಆಂದೋಲನಕ್ಕೆ ಕರೆ ನೀಡಿದ ಸಮಯದಲ್ಲಿ ಕಾಂ. ಸುರ್ಜಿತ್ ಭಾರತದ ನಿಯೋಗದ ಒಬ್ಬ ಸದಸ್ಯನಾಗಿ ಆ ಚಾರಿತ್ರಿಕ ರ್‍ಯಾಲಿಯನ್ನು ವೀಕ್ಷಿಸಿದ ಭಾರತದ ಮುಖಂಡರಲ್ಲಿ ಒಬ್ಬರು.



ನೇಪಾಳದ ಜನತೆ ಗೆದ್ದಿದ್ದಾರೆ

ಆದರೆ ಇನ್ನೂ ಜಾಗರೂಕರಾಗಿರಬೇಕು

ಮೂರು ವಾರಗಳ ಹಿಂದೆ ಏಪ್ರಿಲ್ ೮, ೧೯೯೦ ರಂದು ನೇಪಾಳ ದೊರೆ ಪಂಚಾಯತನ್ನು ವಿಸರ್ಜಿಸಿ ಮಂತ್ರಿ ಮಂಡಲವನ್ನು ಬರ್ಖಾಸ್ತು ಮಾಡಿ ಒಂದು ಮಧ್ಯಂತರ ಸರಕಾರದ ರಚನೆಗೆ ಅವಕಾಶ ಕೊಡಲು, ಬಹು ಪಕ್ಷಿಯ ಪದ್ಧತಿ ತರುವಂತೆ ಸಂವಿಧಾನ ತಿದ್ದುಪಡಿ ಮಾಡಲು ಒಪ್ಪಿಕೊಂಡದ್ದು ನೇಪಾಳದ ಎಡ ಪ್ರಜಾಪ್ರಭುತ್ವ ಶಕ್ತಿಗಳಿಗೊಂದು ದೊಡ್ಡ ವಜಯ. ಈ ವಿಜಯ ನೇಪಾಳೀ ಕಾಂಗ್ರೆಸ್ ಮತ್ತು ಸಂಯುಕ್ತ ಎಡ ರಂಗದ ನೇತೃತ್ವದಲ್ಲಿ ನಡೆದ ಮಹಾನ್ ಹೋರಾಟದ ಫಲ. ನೂರಾರು ಸಾವಿರಾರು ಮಂದಿಯನ್ನು ಜೈಲಿಗೆ ಅಟ್ಟಿದರೂ, ಲಾಠಿ ಪ್ರಹಾರಗಳ ಸುರಿಮಳೆಯಾದರೂ, ನೂರಾರು ಮಂದಿ ಪ್ರಾಣ ಕಳೆಕೊಂಡರೂ ಹಳ್ಳಿಗಳನ್ನು, ಪಟ್ಟಣಗಳನ್ನು ಆವರಿಸಿದ ಉತ್ಕ್ರಾಂತಿಯನ್ನು ಅಡಗಿಸುವುದು ದೊರೆಯಿಂದಾಗಲಿಲ್ಲ. ಜನ ಸಾವಿರ ಸಾವಿರ ಸಂಖ್ಯೆಯಲ್ಲಿ ಆಂದೋಲನಕ್ಕೆ ಮತ್ತೆ ಮತ್ತೆ ಸೌಹಾರ್ದತೆ ವ್ಯಕ್ತಪಡಿಸಿದರು. ಮುಷ್ಕರಗಳಲ್ಲಿ, ಬಂದ್‌ಗಳಲ್ಲಿ ಭಾಗವಹಿಸಿದರು.

ಕೊನೆಯ ಕೆಲವು ದಿನಗಳಲ್ಲಿ ಜನರಿಂದ ದೂರ ಸರಿದ ಪಂಚಾಯತೀ ರಾಜ್ಯ ವ್ಯವಸ್ಥೆ ಜನರ ವಿರುದ್ಧ ಆಡಳಿತ ಶಾಹಿಯನ್ನು, ಸಶಸ್ತ್ರ ಪಡೆಗಳನ್ನು ಬಳಸಲಾರಂಭಿಸಿದಾಗ ಜನ ಬಂಡೆದ್ದು ಎಲ್ಲಾ ರೀತಿಯ ದಮನಗಳನ್ನು ಎದುರಿಸಲು ಮುನ್ನುಗ್ಗಿದರು. ಬಂಡಾಯ ದೇಶವನ್ನೆಲ್ಲಾ ಆವರಿಸಿತು. ಈ ಘಟ್ಟದಲ್ಲೇ ದೊರೆ ಮಾತುಕತೆಗೆ ಬರಬೇಕಾಯಿತು. ಪ್ರಜಾಪ್ರಭುತ್ವದ ಮರು ಸ್ಥಾಪನೆಗೆ ಒಪ್ಪಬೇಕಾಯಿತು.

ಹಿಂದೆಯೂ ೧೯೬೧ ರಲ್ಲಿ ಬಿ.ಪಿ. ಕೊಯಿರಾಲಾ ಸರಕಾರವನ್ನು ದೊರೆ ರದ್ದು ಮಾಡಿದಂದಿನಿಂದ ಮೂರು ದಶಕಗಳಲ್ಲಿ ಎರಡು ಬಾರಿ ಇಂತಹ ಆಂದೋಲನ ನಡೆದಿತ್ತು. ಇದಕ್ಕೆ ಜನಬೆಂಬಲ ದೊರೆತಿದ್ದರೂ ಅದನ್ನು ದಮನ ಮಾಡಲು ದೊರೆಗೆ ಸಾಧ್ಯವಾಗಿತ್ತು. ೧೯೮೦ ರಲ್ಲಿ ಎಲ್ಲಾ ತಂತ್ರಗಳನ್ನು ಬಳಸಿ ಜನಾಭಿಪ್ರಾಯ ಸಂಗ್ರಹದ ಹೆಸರಲ್ಲಿ ಕಸರತ್ತು ನಡೆಸುವುದು ದೊರೆಗೆ ಸಾಧ್ಯವಾಗಿತ್ತು.

ಆದರೆ ಈ ಬಾರಿ ಫೆಬ್ರುವರಿ ೧೮ ರಂದು ಆರಂಭವಾದ ಆಂದೋಲನಕ್ಕೆ ಕೆಲವು ಭಿನ್ನ ಲಕ್ಷಣಗಳಿದ್ದವು. ಮೊದಲನೆಯದಾಗಿ, ಪ್ರಜಾಪ್ರಭುತ್ವ ಪ್ರಜ್ಞೆ ಅಪಾರವಾಗಿ ಬೆಳೆದಿತ್ತು. ವಿಶ್ವಾದ್ಯಂತ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಕ್ಕಾಗಿ ಹೋರಾಡಿದ ಜನರ ಸ್ಫೂರ್ತಿಯೂ ಇತ್ತು. ಎರಡನೆಯದಾಗಿ, ನೇಪಾಳದಲ್ಲಿ ಮಹತ್ವದ ಪ್ರಭಾವ ಹೊಂದಿರುವ ಎಡ ಶಕ್ತಿಗಳು, ಮುಖ್ಯವಾಗಿ ವಿವಿಧ ಕಮ್ಯುನಿಸ್ಟ್ ಪಕ್ಷಗಳು ಸಂಯುಕ್ತ ಎಡ 'ರಂಗ ರೂಪಿಸಿಕೊಂಡು ಪ್ರಜಾಪ್ರಭುತ್ವದ ಮರುಸ್ಥಾಪನೆಯ ಹೋರಾಟದಲ್ಲಿ ಸೇರಲು ನಿರ್ಧರಿಸಿದವು. ಮೂರನೇಯದಾಗಿ, ಹೋರಾಟ ಮುನ್ನಡೆಸುವ ಬಗ್ಗೆ ನೇಪಾಳೀ ಕಾಂಗ್ರೆಸ್ ಮತ್ತು ಸಂಯುಕ್ತ ಎಡರಂಗದ ನಡುವೆ ಐಕ್ಯತೆ ಬೆಸೆಯಿತು. ಬೇಡಿಕೆ ಪಟ್ಟಿ ರೂಪಿಸಿ ಇವೆರಡರ ನಡುವೆ ನಡೆದ ಒಪ್ಪಂದ ಒಂದು ಸಂಯುಕ್ತ ಆಂದೋಲನಕ್ಕೆ ಬುನಾದಿ ಹಾಕಿತು.

ಈ ಮೂರು ಅಂಶಗಳು ಜನತೆಯ ಮೇಲೆ, ಮುಖ್ಯವಾಗಿ ದುಡಿಯುವ ಜನರ ಮೇಲೆ ಸ್ಫೂರ್ತಿದಾಯಕ ಪರಿಣಾಮ ಬೀರಿದವು. ನೇಪಾಳಿ ಕಾಂಗ್ರೆಸ್, ಸಂಯುಕ್ತ ಎಡರಂಗದ ನಡುವಿನ ಹೊಸ ಐಕ್ಯ ವೇದಿಕೆಗೆ ಜನರಿಂದ ಎಷ್ಟೊಂದು ಬೆಂಬಲ ದೊರೆಯಿತೆಂಬುದಕ್ಕೆ ಅವರು ಎಲ್ಲಾ ಪ್ರತಿಬಂಧಕಾಜ್ಞೆಗಳನ್ನು ಉಲ್ಲಂಘಿಸಿ ಈ ಮುಖಂಡರ ಮಾತು ಕೇಳಲು ಸಾವಿರ ಸಂಖ್ಯೆಯಲ್ಲಿ ಸೇರುತ್ತಿದ್ದರೆಂಬುದೇ ಉದಾಹರಣೆ. ಫೆಬ್ರುವರಿ ೧೮ ರ ಆಂದೋಲನಕ್ಕೆ ಕರೆ ನೀಡಿದ ಜನವರಿ ೧೮ರಂದು ಕಾಠ್ಮಂಡುವಿನಲ್ಲಿ ನಡೆದ ಐತಿಹಾಸಿಕ ಬೃಹತ್ ಸಾರ್ವಜನಿಕರ್‍ಯಾಲಿಗೆ ಚಂದ್ರಶೇಖರ್ (ಜನತಾದಳ), ಎಂ. ಫಾರುಕಿ (ಸಿ.ಪಿ.ಐ.) ಯವರ ಜತೆಗೆ ನಾನೂ ಸಾಕ್ಷಿ.

ಈ ರ್‍ಯಾಲಿ ದೊರೆ ಮತ್ತು ಆತನ ಬೆಂಬಲಿಗರನ್ನು ನಡುಗಿಸಿತು. ಭಾರತೀಯ ಪ್ರತಿನಿಧಿ ಮಂಡಳಿ ತಂಗಿದ್ದ ಹೋಟೇಲ್ ಆವರಣದಲ್ಲಿ ಸರಕಾರೀ ಯಂತ್ರ, ಪೋಲೀಸ್ ಬಳಸಿ ಸಮಾಜ ವಿರೋಧಿ ವ್ಯಕ್ತಿಗಳನ್ನು ಸೇರಿಸಿ ಭಾರತ ವಿರೋಧಿ ಘೋಷಣೆ ಹಾಕಲಾಯಿತು. ನೇಪಾಳದ ಜನತೆ ಇದಕ್ಕೆ ತಕ್ಕ ಉತ್ತರ ಕೊಟ್ಟರು. ದೊರೆಯ ಬೆಂಬಲಿಗರ ಮತ ಪ್ರದರ್ಶನದ ಸುದ್ದಿ ತಿಳಿದ ಕೂಡಲೇ ಸಾವಿರಾರು ಯುವಜನರು, ವಿದ್ಯಾರ್ಥಿಗಳು ವಿಮಾನ ನಿಲ್ದಾಣದಲ್ಲಿ ಸೇರಿ ನೇಪಾಳಿ ಪ್ರಜಾಪ್ರಭುತ್ವ ಶಕ್ತಿಗಳೊಂದಿಗೆ ಸೌಹಾರ್ದತೆ ತೋರಲು ಬಂದು ಭಾರತದ ಪ್ರತಿನಿಧಿಗಳಿಗೆ ಹೃತ್ಪೂರ್ವಕ ಬೀಳ್ಕೊಡುಗೆ ನೀಡಿದರು. ನಂತರವೂ ಈ ಆಂದೋಲನ ಭಾರತದ ಚಿತಾವಣೆ ಎಂದು ದೊರೆ ಎಷ್ಟೇ ಅಪ-ಪ್ರಚಾರ ನಡೆಸಿದರೂ ಅರಸೊತ್ತಿಗೆಯ ಆಳ್ವಿಕೆ ಅನುಭವಿಸಿದ ಜನ ನಂಬಲಿಲ್ಲ.



-ಹರ್ಕಿಶನ್‌ಸಿಂಗ್ ಸುರ್ಜಿತ್

೫೦ ದಿನಗಳ ತೀವ್ರ ಹೋರಾಟದ ಫಲವಾಗಿ ನಡೆದ ಎರಡು ದಿನಗಳ ಮಾತುಕತೆಗಳಲ್ಲೂ ಪಂಚಾಯತು ವ್ಯವಸ್ಥೆಯ ಬೆಂಬಲಿಗರು ತಮ್ಮ ಹಿತಾಸಕ್ತಿ ರಕ್ಷಿಸಿಕೊಳ್ಳುವ ರಾಜಿಗೆ ಎಷ್ಟೇ ಪ್ರಯತ್ನ ಪಟ್ಟರೂ ಜನತೆಯ ಆಕಾಂಕ್ಷೆಯೇ ಕೊನೆಗೆ ಗೆದ್ದಿತು. ನೇಪಾಳಿ ಕಾಂಗ್ರೆಸ್ ಮತ್ತು ಸಂಯುಕ್ತ ಎಡರಂಗದ ನಡುವೆ ಭಿನ್ನಾಭಿಪ್ರಾಯ ತಂದಿಡಲು ದೊರೆಗೆ ಆಗಲಿಲ್ಲ. ದೊರೆ ಆಂದೋಲನದ ಎಲ್ಲಾ ಬೇಡಿಕೆಗಳಿಗೆ ಒಪ್ಪಬೇಕಾಯಿತು.

ನೇಪಾಳೀ ಜನತೆಯ ಈ ಗೆಲುವನ್ನು ಭಾರತದ ಎಲ್ಲಾ ಪ್ರಜಾಪ್ರಭುತ್ವದ ಶಕ್ತಿಗಳೂ ಅತ್ಯುತ್ಸಾಹದಿಂದ ಸ್ವಾಗತಿಸಿದರು. ನಮ್ಮ ಪಕ್ಷ ಮತ್ತು ದೇಶದ ಎಡಪಂಥೀಯರು ತಕ್ಷಣ ನೇಪಾಳದ ಜನತೆಗೆ ಅಭಿನಂದನಾ ಸಂದೇಶಕಳುಹಿಸಿದರು.

ಆಂದೋಲನ ಸಾಗಿದ್ದಾಗಲೂ ನಾವು ದೊರೆಯ ದಮನವನ್ನು ಖಂಡಿಸಿದ್ದು ಮಾತ್ರವಲ್ಲ ಅವರ ಹೋರಾಟಕ್ಕೆ ಭಾರತೀಯ ಜನತೆಯ ಸೌಹಾರ್ದವನ್ನು ವ್ಯಕ್ತಪಡಿಸಿದೆವು. ಆಂದೋಲನದ ಬೇಡಿಕೆಗಳಿಗೆ ಬೆಂಬಲ ಸೂಚಿಸಲು, ನೇಪಾಳ ಸರಕಾರದ ದಮನಕಾರೀ ಕ್ರಮಗಳನ್ನು ಖಂಡಿಸಲು ದೆಹಲಿಯಲ್ಲಿ ಒಂದು ಸರ್ವಪಕ್ಷ ಸಭೆ ನಮ್ಮ ಪಕ್ಷದ ಪ್ರಯತ್ನದಿಂದ ನಡೆಯಿತು.

ನೇಪಾಳ, ಭಾರತದ ಪ್ರಾಚೀನ ಮಿತ್ರತ್ವಪೂರ್ಣ ಸಂಬಂಧಗಳು ನೇಪಾಳೀ ಜನತೆಯ ಈ ವಿಜಯದಿಂದ ಮತ್ತೆ ಸ್ಥಾಪನೆಯಾಗುತ್ತವೆ ಎಂಬುದು ಸ್ವಯಂ ವೇದ್ಯ. ೧೯೫೦ರ ಸಂಧಿಯ ಅವಧಿ ಮುಗಿದುದರಿಂದ ನಮ್ಮೆರಡು ದೇಶಗಳ ನಡುವೆ ಎದ್ದಿದ್ದ ಸಮಸ್ಯೆಗಳನ್ನೀಗ ಸೌಹಾರ್ದಯುತವಾಗಿ ಪರಿಹರಿಸಬಹುದು.

ಪ್ರತಿಗಾಮಿಗಳ ಹತಾಶ ಯತ್ನ

ಜನರ ರೊಚ್ಚಿನಿಂದಾಗಿ ದಮನ ಕಾರ್ಯ ಮುಂದುವರೆಸುವಂತೆ ದೊರೆಯನ್ನು ಒತ್ತಾಯಿಸಲಾಗದ ಪಂಚಾಯತೀ ವ್ಯವಸ್ಥೆಯ ಬೆಂಬಲಿಗರಿಗೆ ಅಂತಿಮವಾಗಿ ಪ್ರಜಾಪ್ರಭುತ್ವ ಮರುಸ್ಥಾಪನೆಯ ಆಂದೋಲನದೊಂದಿಗೆ ಇತ್ಯರ್ಥಕ್ಕೆ ಬಂದಾಗ ದೊರೆ ತಮ್ಮ ಕೈ ಬಿಟ್ಟ ಎಂದನಿಸಿತು. ಮೂರು ದಶಕಗಳ ಅರಸೊತ್ತಿಗೆಯಲ್ಲಿ ಈ ಶಕ್ತಿಗಳು ಪಟ್ಟಭದ್ರ ಹಿತಾಸಕ್ತಿಗಳನ್ನು ಬೆಳೆಸಿಕೊಂಡಿದ್ದವು. ಅವನ್ನು ಕಳಕೊಳ್ಳಲು ಅವು ಸಿದ್ಧವಿರಲಿಲ್ಲ. ಆದ್ದರಿಂದ ಕೆಲವು ದಿನಗಳ ನಂತರ ಪ್ರತಿಗಾಮಿ, ಕ್ರಾಂತಿ ವಿರೋಧಿ ಶಕ್ತಿಗಳು ಮತ್ತೆ ಸಕ್ರಿಯವಾಗಲಾರಂಭಿಸಿದವು. ದೊರೆಯ ಪಂಚಾಯತ್ ವ್ಯವಸ್ಥೆಯ ಉಗ್ರ ಬೆಂಬಲಿಗರು ಸಾಕಿದ ಸಮಾಜ ಘಾತುಕ ಶಕ್ತಿಗಳಾದ 'ಮಂಡಳಿ'ಗಳ ಮೂಲಕ ಆಂದೋಲನದ ಮುಖಂಡರು ಹಾಗೂ ಕಾರ್ಯಕರ್ತರ ಮೇಲೆ ಹಲ್ಲೆ ಆರಂಭವಾಯಿತು. ಏಪ್ರಿಲ್ ೨೩ ರಂದು ಕೆ.ಪಿ. ಭಟ್ಟರಾಯ್ ನೇತೃತ್ವದಲ್ಲಿ ಹೊಸ ಸರಕಾರ ಅಧಿಕಾರ ವಹಿಸಿಕೊಂಡ ಕೂಡಲೇ ಅವರು ತಮ್ಮ ಹಲ್ಲೆಗಳನ್ನು ತೀವ್ರಗೊಳಿಸಿದರು. ಪೋಲೀಸರು ಮತ್ತು ಆಡಳಿತ ಮೂಕ ಪ್ರೇಕ್ಷಕರಾಗಿದ್ದರು. ರಾತ್ರಿಯಾದ ಕೂಡಲೇ ಈ "ಮಂಡಳಿ" ತಂಡಗಳು ಹೊರಬಂದು ಮನೆಗಳು, ಅಂಗಡಿಗಳ, ಮೇಲೆ ಹಲ್ಲೆ, ಲೂಟಿ ಆರಂಭಿಸುತ್ತಿದ್ದವು. ವಿಶೇಷವಾಗಿ ಪ್ರಜಾ ಪ್ರಭುತ್ವ ಪರ ಕಾರ್ಯಕರ್ತರ ಮೇಲೆ ಹಲ್ಲೆಗಳನ್ನು ನಡೆಸಲಾರಂಭಿಸಿತು.

ಪ್ರತಿಗಾಮಿ ಶಕ್ತಿಗಳ ಆಟವನ್ನು ಅರಿತ ನೇಪಾಳಿ ಕಾಂಗ್ರೆಸ್ ಮತ್ತು ಸಂಯುಕ್ತ ಎಡರಂಗ ಕಾರ್ಯಾಚರಣೆಗಿಳಿದವು. ಯುವಕರ ಜಾಗೃತಾ ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ಲೂಟಿ, ಹಲ್ಲೆಗಳ ಬಗ್ಗೆ ಪೋಲೀಸರಿಗೆ ತಿಳಿಸಿದಾಗ ಅವರು ಏನೂ ಕ್ರಮ ಕೈಗೊಳ್ಳಲಿಲ್ಲ. ಮಾತ್ರವಲ್ಲ, ಗೇಲಿ ಮಾಡಿದರು ಕೂಡಾ. ಏಪ್ರಿಲ್ ೨೩ ರ ರಾತ್ರಿ ಈ ಮಂಡಳಿ ಪಡೆಗಳ ಲೂಟಿ, ಹಿಂಸಾಚಾರದ ಸುದ್ದಿ ಕೇಳಿದ ಜನ ದೊಡ್ಡ ಸಂಖ್ಯೆಯಲ್ಲಿ ಬೀದಿಗಿಳಿದರು. 'ಮಂಡಳಿ' ಗ್ಯಾಂಗ್‌ಗಳೊಂದಿಗೆ ಬಹಿರಂಗವಾಗಿ ಶಾಮೀಲಾದ ಪೋಲೀಸರ ಮೇಲೆಯೇ

ನೇಪಾಳದ ಜನತೆ ಅತ್ಯಂತ ಜಾಗರೂಕರಾಗಿರಬೇಕು ಪಂಚಾಯತ್ ವ್ಯವಸ್ಥೆಯಲ್ಲಿ ವಿಶೇಷ ಸೌಲಭ್ಯಗಳನ್ನು ಪಡೆದಿದ್ದ ಪ್ರತಿಗಾಮಿ ಶಕ್ತಿಗಳು ಸುಮ್ಮನಿರುವುದಿಲ್ಲ. ದೊರೆ ಬೀರೇಂದ್ರ ಭಟ್ಟಾರಾಯ್ ಸರಕಾರ ದೊಂದಿಗೆ ಸಹಕರಿಸಲು ಒಪ್ಪಿದರೂ ಆತನ ನಡವಳಿಕೆ ಸಂಶಯಾಸ್ಪದ ವಾಗಿದೆ. ಆತ ತನ್ನದೇ ಆಟ ಆಡುತ್ತಿದ್ದಾನೆ.



'ಮಂಡಳಿ'ಗಳ ಸದಸ್ಯರು ಮತ್ತು ಅವರೊಂದಿಗೆ ಪೋಲೀಸರ ಶಾಮೀಲಿನಿಂದ ಕೊಲ್ಲಲ್ಪಟ್ಟ, ಜನತೆಯ ಸಿಟ್ಟಿಗೆ ತುತ್ತಾದ ಪೋಲೀಸರು



ಜನ ಹಲ್ಲೆ ಆರಂಭಿಸಿದರು. "ಮಂಡಳಿ" ಗಳಿಗೆ ತಕ್ಕ ಪಾಠ ಕಲಿಸಿದರು.

ಈ ಮಂಡಳಿಗಳಿಗೆ ಅರಸೊತ್ತಿಗೆಯ ಕಾಲದಲ್ಲಿ ರಾಷ್ಟ್ರೀಯ ಕ್ರೀಡಾ ಮಂಡಳಿ ಜೂಡೋ, ಕರಾಟೆ ತರಬೇತಿ ನೀಡಿತ್ತು. ಈ "ಮಂಡಳಿ" ಗಳಿಗೆ ನೆರವು ನೀಡಿದ

'ಪೋಲೀಸರ ಮೇಲೆ ಸಿಟ್ಟಿಗೆದ್ದ ಜನ ನಡೆಸಿದ ಧಾಳಿಯಲ್ಲಿ ಇಬ್ಬರು ಪೋಲೀಸರು ಸತ್ತರು. ಜನರ ಮೇಲೆ ಗೋಳಿ ಬಾರಿಗೆ ಆಜ್ಞೆ ನೀಡಿದ ಪೋಲೀಸ್ ಕಮಿಷನರ್ ಕಚೇರಿಯ ಮೇಲೂ ಜನ ಹಲ್ಲೆ ಮಾಡಿದರು. ಐ.ಜಿ.ಪಿ. ಯೂ ಸೇರಿ ದಂತೆ 'ಮಂಡಳಿ" ಗಳೊಂದಿಗೆ ಶಾಮೀ ಲಾದ ಇತರ ಪೋಲೀಸರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ನೇಪಾಳ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಮನ ಮೋಹನ್ ಅಧಿಕಾರಿ ಒಪ್ಪಂದ ಮುರಿ ಯಲು ಏನಾದರೂ ದೊರೆ ಬೀರೇಂದ್ರ ಯತ್ನಿಸಿದರೆ ದೊಡ್ಡ ಉತ್ಪಾತವೇ ನಡೆದೀತು ಎಂದು ಎಚ್ಚರಿಸಿದರು. ಭಟ್ಟಾರಾಯ್ ಸರ್ಕಾರವನ್ನು ಉರುಳಿಸಲು ಯತ್ನಿಸಿದರೆ ಸರಿಯಾದ ಪಾಠ ಕಲಿಸಲಾಗುವುದು ಎಂದು 'ಮಂಡಳಿ'ಗಳನ್ನು 'ಪಂಚಾಯತಿ' ಗಳನ್ನು ಎಚ್ಚರಿಸಲಾಯಿತು. ನೇಪಾಳಿ ಕಾಂಗ್ರೆಸ್‌ನ ಗಿರಿಜಾ ಪ್ರಸಾದ್ ಕ್ಕೊರಾಲಾ ಕೂಡಾ ಇದೇ ರೀತಿ ಎಚ್ಚರಿಕೆ ನೀಡಿದರು.

ಮಂತ್ರಿ ಮಂಡಳದ ತುರ್ತು ಸಭೆ ನಡೆದು ಮಾಜಿ ಪಂಚಾಯತು ವ್ಯವಸ್ಥೆಯ ಪ್ರಜಾಪ್ರಭುತ್ವ ವಿರೋಧಿ ಶಕ್ತಿಗಳ ಹಿಂಸಾಚಾರ ನಿಲ್ಲಿಸುವಲ್ಲಿ ದೊರೆ ಸಹಕಾರ ನೀಡದಿದ್ದರೆ. ರಾಜೀನಾಮೆ ನೀಡಿ ಮತ್ತೆ ಜನರ ಬಳಿಗೆ ಹೋಗುವುದಾಗಿ ಎಚ್ಚರಿಸಿತು.

ಎರಡೇ ದಿನಗಳಲ್ಲಿ ಮಂಡಳಿಗಳು ೧೯ ಜನರನ್ನು ಕೊಂದು ೭೦ ಮಂದಿ ಯನ್ನು ಗಾಯಗೊಳಿಸಿದರು. ಏಪ್ರಿಲ್ ೨೪ರಂದು ಕರ್ಫ್ಯೂ ವಿಧಿಸಲಾಯಿತು.

ಪೋಲೀಸರು ಅಲ್ಲಲ್ಲಿ ದಂಗೆಯೆಳುವ ಲಕ್ಷಣಗಳಿದ್ದುದರಿಂದ ಸೇನೆ ಕರೆಸ ಲಾಯಿತು. ಪರಿಸ್ಥಿತಿ ಹತೋಟಿಗೆ ಬಂತು.

ಆದರೂ ನೇಪಾಳದ ಜನತೆ ಅತ್ಯಂತ ಜಾಗರೂಕರಾಗಿರಬೇಕು. ಪಂಚಾಯತ್ ವ್ಯವಸ್ಥೆಯಲ್ಲಿ ವಿಶೇಷ ಸೌಲಭ್ಯಗಳನ್ನು ಪಡೆದಿದ್ದ ಪ್ರತಿಗಾಮಿ ಶಕ್ತಿಗಳು ಸುಮ್ಮನಿರುವುದಿಲ್ಲ. ದೊರೆ ಬೀರೇಂದ್ರ ಭಟ್ಟಾರಾಯ್ ಸರಕಾರದೊಂದಿಗೆ ಸಹಕರಿಸಲು ಒಪ್ಪಿದರೂ ಆತನ ನಡವಳಿಕೆ ಸಂಶಯಾಸ್ಪದವಾಗಿದೆ. ಆತ ತನ್ನದೇ ಆಟ ಆಡುತ್ತಿದ್ದಾನೆ ಎಂಬುದು ಏಪ್ರಿಲ್ ೨೫ ರಂದು ಕಂಡು ಬಂತು. "ಮಂಡಳಿ'ಗಳ ಕ್ರಿಮಿನಲ್ ಚಟುವಟಿಕೆಗಳಿಗೆ ನೆರವಾದ ಕೆಲವು ಅಧಿಕಾರಿಗಳನ್ನು ವಜಾ ಮಾಡಲು ಪ್ರಧಾನ ಮಂತ್ರಿ ನೀಡಿದ ಸಲಹೆಯನ್ನು ಆತ ಮನ್ನಿಸಲಿಲ್ಲ. ಪ್ರಧಾನಮಂತ್ರಿ ಮತ್ತೆ ರಾಜೀನಾಮೆಯ ಬೆದರಿಕೆ ಹಾಕ ಬೇಕಾಯಿತು.

ಅಂದರೆ ಪ್ರಜಾಪ್ರಭುತ್ವದ ಮರು ಸ್ಥಾಪನೆಯ ಆಂದೋಲನದ ಸಾಧನೆಗಳು ಇನ್ನೂ ಸುರಕ್ಷಿತವಾಗಿಲ್ಲ. ಅದನ್ನು ಕ್ರೋಢೀ ಕರಿಸಬೇಕು. ಮುನ್ನಡೆಸಬೇಕು. ಇದರಲ್ಲಿ ಏನಾದರೂ ಚ್ಯುತಿ ಬಂದರೆ ಒಂದು ಪ್ರಜಾಸತ್ತಾತ್ಮಕ ನೇಪಾಳದ ರಚನೆಗೆ ತೊಡಕು ಬರುತ್ತದೆ ಆದ್ದರಿಂದ ಕಳೆದೆರಡು ತಿಂಗಳಲ್ಲಿ ತೋರಿದ ಆಸಕ್ತಿಯನ್ನು ಜನರು ಈಗ ಅದರ ರಕ್ಷಣೆಯಲ್ಲೂ ತೋರಬೇಕು.

ಈ ಸಂದರ್ಭದಲ್ಲಿ ನಾವು ನೇಪಾಳೀ ಜನತೆಗೆ ಪೂರ್ಣ ಬೆಂಬಲ, ಸೌಹಾರ್ದ ವ್ಯಕ್ತಪಡಿಸುತ್ತೇವೆ. ಭಾರತ ಸರಕಾರವೂ ನೆರೆದೇಶದಲ್ಲಿ ಶಾಂತಿ ಕದಡಿದರೆ ಅದರಿಂದ ಎಲ್ಲರಿಗೂ ತೊಂದರೆ ಎಂದು ಆತಂಕ ವ್ಯಕ್ತಪಡಿಸಿದೆ.

ನೇಪಾಳದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆ ಕ್ರೋಢೀಕರಣಗೊಂಡರೆ ಅಂತಿಮವಾಗಿ ಅದು ಸಾಮ್ರಾಜ್ಯಶಾಹೀ ಶಕ್ತಿಗಳ ಬುಡಕ್ಕೂ ಏಟು ನೀಡುವುದರಿಂದ ಸಾಮ್ರಾಜ್ಯಶಾಹಿ ಶಕ್ತಿಗಳು ಮತ್ತು ಪ್ರತಿಗಾಮಿ ಶಕ್ತಿಗಳಿಗೆ ಇದು ರುಚಿಸಲಿಕ್ಕಿಲ್ಲ.

ಇತ್ತೀಚಿನ ದಿನಗಳಲ್ಲಿ ನೇಪಾಳೀ ಜನತೆ ತೋರಿದ ಜಾಗರೂಕತೆಯನ್ನು ಮುಂದಿನ ದಿನಗಳಲ್ಲೂ ತೋರಿ ತಮ್ಮ ಆಂದೋಲನದ ಸಾಧನೆಗಳನ್ನು ಕಾಯ್ದುಕೊಳ್ಳುತ್ತಾರೆ ಎಂಬ ಭರವಸೆ ನಮಗಿದೆ. ಇದರಲ್ಲಿ ನೇಪಾಳೀ ಕಾಂಗ್ರೆಸ್ ಮತ್ತು ಸಂಯುಕ್ತ ಎಡರಂಗದ ನಡುವಿನ ಐಕ್ಯತೆ ಅತ್ಯಂತ ಮಹತ್ವದ ಸಂಗತಿ. ಇವೆರಡರ ನಡುವೆ ಭಿನ್ನಾಭಿಪ್ರಾಯ ಸೃಷ್ಟಿಸುವ ಪ್ರಯತ್ನಗಳಿಗೆ ಬಲಿಯಾಗುವುದೆಂದರೆ ಪ್ರತಿಗಾಮಿ ಶಕ್ತಿಗಳ ಬಲೆಗೆ ಬಿದ್ದಂತೆಯೇ.

ನೇಪಾಳದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆ ಕ್ರೋಢೀಕರಣಗೊಂಡರೆ ಅಂತಿಮವಾಗಿ ಅದು ಸಾಮ್ರಾಜ್ಯಶಾಹೀ ಶಕ್ತಿಗಳ ಬುಡಕ್ಕೂ ಏಟು ನೀಡುವುದರಿಂದ ಸಾಮ್ರಾಜ್ಯಶಾಹಿ ಶಕ್ತಿಗಳು ಮತ್ತು ಪ್ರತಿಗಾಮಿ ಶಕ್ತಿಗಳಿಗೆ ಇದು ರುಚಿಸಲಿಕ್ಕಿಲ್ಲ.

ಕಾನಪುರ ದಂಗೆ

ಕ್ರಿಮಿನಲ್‌ಗಳು ಮತ್ತು ಮೂಲಭೂತವಾದಿಗಳ ಕೂಟದ ಚಿತಾವಣೆ

ಸಾವಿರಾರು ಹೃದಯಗಳಲ್ಲಿ ಸಂಶಯದ ನಿಗಿನಿಗಿ ಕೆಂಡ

೧೯೩೧ರಿಂದಲೂ ಕೋಮು ಸೌಹಾರ್ದದ ಹೆಮ್ಮೆಯ ಪರಂಪರೆ ಕಾದು ಕೊಂಡು ಬಂದ ನಗರ ೧೯೪೭ ರಲ್ಲಿ ಉತ್ತರಭಾರತದ ಇತರೆಡೆ ಭಾಷಣ ಕೋಮುಗಲಭೆಗಳು ನಡೆದಾಗಲೂ ಯಾವುದೇ ಕೋಮು ಪುಚ್ಚಾಟ ಕಾಣದ ನಗರವಿದು. ಇದಕ್ಕೆ ಕಾರಣ ಕಾರ್ಮಿಕ ವರ್ಗದ ಶಕ್ತಿ, ಐಕ್ಯ ಹೋರಾಟದ ದೀರ್ಘ ಪರಂಪರೆ ಮತ್ತು ಕೋಮು ಸೌಹಾರ್ದಕ್ಕಾಗಿ ಪ್ರಾಣಾರ್ಪಣೆ ಮಾಡಿದ ಗಣೇಶ ಶಂಕರ ವಿದ್ಯಾರ್ಥಿ ಯವರ ನೆನಪು ಈ ಪರಂಪರೆಯಲ್ಲೇ ಇತ್ತೀಚೆಗೆ ಸಿ.ಪಿ.ಐ.(ಎಂ) ಅಭ್ಯರ್ಥಿ ಕಾ. ಸುಭಾಷಿಣಿ ಅಲಿಯವರನ್ನು ಈ ನಂತರ ಲೋಕಸಭೆಗೆ ತನ್ನ ಪ್ರತಿನಿಧಿಯನ್ನಾಗಿ ಆರಿಸಿತ್ತು.

ಆದರೂ ಇತ್ತೀಚಿನ ವರ್ಷಗಳಲ್ಲಿ ದೇಶದಲ್ಲಿ ಕೋಮು ಸ್ಥಿತಿಯ ಲ್ಲುಂಟಾದ ತೀವ್ರತೆ, ಬಿ.ಜೆ.ಪಿ. ಆರ್.ಎಸ್.ಎಸ್., ವಿ.ಹೆಚ್.ಪಿ. ಭಜರಂಗದಳಗಳು ಹರಡಿರುವ ವಿಷ ಪೂರಿತ ಕೋಮು ಅಪಪ್ರಚಾರ ಎಂತಹ ಪರಿಸ್ಥಿತಿ ನಿರ್ಮಿಸಿದೆಯೆಂದರೆ ಒಂದು ಅಲ್ಪಸಂಘಟನೆಯೂ ಕೋಮು ದಂಗೆ ಗಳಿಗೆ ಎಡೆಮಾಡಿಕೊಡುವ ಸನ್ನಿವೇಶ. ಕಾನಪುರವೂ ಇದಕ್ಕೆ ಹೊರತಾಗಲಿಲ್ಲ. ಏಪ್ರಿಲ್ ೧೮ರ ಒಂದು ಸಣ್ಣ ಘಟನೆ ದಂಗೆಯಾಗಿ ಪರಿಣಮಿಸಿತು. ಐದು ಜನರ ಆಹುತಿ ಪಡೆಯಿತು ಹಲವಾರು ಮಂದಿ ಗಾಯಗೊಂಡರು ಹತ್ತಾರು ಮನೆಗಳು, ಅಂಗಡಿಗಳು ಭಸ್ಮ ವಾದವು. ಎಲ್ಲಕ್ಕೂ ಮಿಗಿಲಾಗಿ ಸಾವಿರಾರು ಹೃದಯಗಳಲ್ಲಿ ಸಂಶಯದ ನಿಗಿನಿಗಿ ಕೆಂಡ.

ಏಪ್ರಿಲ್ ೧೮ ರಂದು ಕಾನಪುರ ರಸ್ತೆಯಲ್ಲಿ ಒಂದು ಸಣ್ಣ ಅಪಘಾತ ನಡೆಯಿತು. ಮೋಟಾರು ಸೈಕಲ್ ಮತ್ತು ಒಂದು ಸೈಕಲ್ ನಡುವೆ. ನಗರದ ಒಂದು ಸೂಕ್ಷ್ಮ ಜಾಗವಿದು ಅಪಘಾತಕೊಳಗಾದವರು ಇಬ್ಬರು ಪರಸ್ಪರ ವಿರೋಧಿ ಕ್ರಿಮಿನಲ್ ಗ್ಯಾಂಗ್‌ಗಳಿಗೆ ಸೇರಿದ ವ್ಯಕ್ತಿಗಳು. ಒಬ್ಬಾತ ಕಾಂಗ್ರೆಸ್(ಐ)ನ ಮುಸ್ಲಿಂ ಕಾರ್ಪೋರೇಟರ್‌ನ ಪೋಷಣೆ ಪಡೆದ ಗ್ಯಾಂಗಿನ ಸದಸ್ಯ, ಇನ್ನೊಬ್ಬಾತ ಇತ್ತೀಚೆಗೆ ಭಜರಂಗ ದಳ ಸೇರಿದ ಗ್ಯಾಂಗ್ ಸದಸ್ಯ.. ಈತ ಹರಿಜನ, ಫಲವಾಗಿ ತಕ್ಷಣ ಸ್ಥಿತಿ ಪ್ರಕೋಪಕ್ಕೆ ಹೋಯಿತು ಹಲವೆಡೆ ಲೂಟಿ, ಅಗ್ನಿಸ್ಪರ್ಷ ನಡೆಯಿತು.

ಆದರೆ ದೊಡ್ಡ ಗುಂಪು ತಿಕ್ಕಾಟಗಳು ನಡೆಯಲಿಲ್ಲ. ಕರ್ಫ್ಯೂ ವಿಧಿಸಲಾಯಿತು. ಪಕ್ಕದ ಅಲ್ಪ ಸಂಖ್ಯಾತರಿದ್ದ ಬಡಾವಣೆಯಲ್ಲೂ ಕೆಲವೇ ಘಂಟೆಗಳಲ್ಲಿ ಪರಿಸ್ಥಿತಿ ಹತೋಟಿಗೆ ಬಂತು. ಮರುದಿನ ಶಾಂತಿ ಯುತವಾಗಿತ್ತು. ಆದರೆ ರಾತ್ರಿಯ ವೇಳೆಗೆ ಇದ್ದಕ್ಕಿದ್ದಂತೆ ಮನೆಯ ಮಾಡುಗಳಿಂದ ಬೆಂಕಿ ಯುಂಡೆಗಳು ಹಾರಲಾರಂಭಿಸಿದವು. ಬಾಂಬುಗಳು ಸ್ಫೋಟ ಗೊಂಡವು. ಪೋಲೀಸರು, ಪಿ.ಎ..ಸಿ. ಗೋಳಿಬಾರ್ ನಡೆಸಿತು. ೫ ಜನ ಸತ್ತರು ಎಲ್ಲರೂ ಅಲ್ಪಸಂಖ್ಯಾತ ಕೋಮಿನವರು. ಮುಂಜಾವಿನ ಹೊತ್ತಿಗೆ ವ್ಯವಸ್ಥೆ ಕೊನೆ ಗೊಂಡಿತು. ಸೇನೆ ಕರೆತರಲಾಯಿತು. ಅಲ್ಪಸಂಖ್ಯಾತರು ಇದನ್ನು ಸ್ವಾಗತಿಸಿದರು.

ಏಪ್ರಿಲ್ ೧೯ರ ಆ ರಾತ್ರಿಯ ನಂತರ ಅಹಿತಕರ ಘಟನೆಗಳೇನೂ ನಡೆದಿಲ್ಲ.

ಆದರೆ ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಸ್ಥಳೀಯ ಪತ್ರಿಕೆ ಗಳಲ್ಲಿ ಆರ್.ಎಸ್.ಎಸ್.ಗಳು ಮತ್ತು ಅವರ ಬೆಂಬಲಿಗರು ನಡೆಸಿರುವ ಕೋಮು ಅಪಪ್ರಚಾರ.

ಆಶ್ಚರ್ಯ ಉಂಟು ಮಾಡುವ ಸಂಗತಿಯೆಂದರೆ ಇಂತಹ ಪರಿಸ್ಥಿತಿ ಯಲ್ಲೂ ಏಪ್ರಿಲ್ ೧೯ರಂದು 'ಧರ್ಮ ಜಾಗರಣ'ದ ಹೆಸರಿನಲ್ಲಿ ಒಂದು ಮೆರವಣಿಗೆಗೆ ಅವಕಾಶ ನೀಡಿದ್ದು. ಈ ಮೆರವಣಿಗೆಯ ಮಾರ್ಗದುದ್ದಕ್ಕೂ ಅತ್ಯಂತ ಉದ್ರೇಕ ಕಾರಿ, ಅವಾಚ್ಯ ಘೋಷಣೆಗಳನ್ನು ಹಾಕಲಾಯಿತು. ನಂತರ ಪ್ರತಿದಿನ ಆರ್.ಎಸ್.ಎಸ್. ಗ್ಯಾಂಗ್‌ಗಳು ನಗರಾ ದ್ಯಂತ ಕೋಮುಉನ್ಮಾದ ಹರಡಲು ಊಹಾ-ಪೋಹಗಳನ್ನು ಸೃಷ್ಟಿಸಲಾ ರಂಭಿಸಿದರು. ವಿಶೇಷವಾಗಿ ಸ್ಥಳೀಯ ಸಿ.ಪಿ.ಐ. (ಎಂ) ಮೇಲೆ ಈ ದೂಷಣೆ, ಅಪಪ್ರಚಾರ ಹರಿಬಿಡಲಾಯಿತು. ಆದರೆ ಇದುವರೆಗೆ ಇದರ ಪ್ರಭಾವ ಜನರ ಮೇಲೆ ಬಿದ್ದಂತಿಲ್ಲವಾದರೂ ಆದರೆ ವಾತಾವರಣದಲ್ಲಿ ವಿಷ ತುಂಬುತ್ತಿರುವುದು ಕಾಣಬರುತ್ತಿದೆ.

ಸಿ.ಪಿ.ಐ.(ಎಂ) ಈ ವಿಷವನ್ನು ಎದುರಿಸಲು ನಗರದ ವಿವಿಧ ಭಾಗಗಳಲ್ಲಿ ತನ್ನ ಕಾರ್ಯಕರ್ತರನ್ನೂ, ಬೆಂಬಲಿಗರನ್ನು ಸಕ್ರಿಯ ಗೊಳಿಸುತ್ತಿದೆ. ಶಾಂತಿ ಸಮಿತಿಯನ್ನು ಸ್ಥಾಪಿಸಿದೆ. ಸಿ.ಪಿ.ಐ.(ಎಂ) ಹಾಗೂ ಜನತಾ ದಳದ ಎಂ.ಪಿ.ಗಳು ನಗರದಲ್ಲಿ ಏಪ್ರಿಲ್ ೨೩ ರಂದು ಒಂದು ದೊಡ್ಡ ಶಾಂತಿ ಸಭೆ ನಡೆಸಿದರು. ಸಿ.ಪಿ.ಐ. ಮುಖಂಡರೂ ಇದರಲ್ಲಿ ಭಾಗವಹಿಸಿದರು. ಹಲವಾರು ವಕೀಲರು, ವಿದ್ಯಾರ್ಥಿಗಳು, ಶಿಕ್ಷಕರು, ಕಾರ್ಮಿಕ ಸಂಘಟನೆಗಳ ಕಾರ್ಯ ಕರ್ತರು, ಕಾರ್ಪೋರೇಟರುಗಳ, ಪ್ರತಿಷ್ಠಿತ ನಾಗರೀಕರು ಇದರಲ್ಲಿ ಭಾಗವಹಿಸಿ ದ್ದರು. ಮೂಲಭೂತ ವಾದಿಗಳು ಸವಾಲನ್ನು ಎದುರಿಸಿ ಕೋಮು ಸೌಹಾರ್ದತೆ ಕಾಪಾಡಲು ಸಭೆ ಸರ್ವಾನು ಮತದಿಂದ ನಿರ್ಧರಿಸಿತು. ಶಾಂತಿಸಮಿತಿಗಳನ್ನು ರಚಿಸಲು, ಕರಪತ್ರ ಮುದ್ರಿಸಿ ನಗರಾದ್ಯಂತ ಹಂಚಲು ಒಂದು ಬೃಹತ್ ಶಾಂತಿ ಮೆರವಣಿಗೆ ನಡೆಸಲೂ ನಿರ್ಧರಿಸಲಾಯಿತು.

ಪೋಲಿಟ್‌ಬ್ಯೂರೋ ಆತಂಕ

ಏಪ್ರಿಲ್ ೧೮ ಹಾಗೂ ೧೯ ರಂದು ಕಾನಪುರದಲ್ಲಿ ನಡೆದ ಕೋಮು ಹಿಂಸಾಚಾರದ ಬಗ್ಗೆ ಸಿ.ಪಿ.ಐ.(ಎಂ) ಪೋಲಿಟ್‌ಬ್ಯೂರೋ ತನ್ನ ತೀವ್ರ ಆತಂಕ ವ್ಯಕ್ತಪಡಿಸಿದೆ. ಅದೃಷ್ಟವಶಾತ್, ಅದು ನಗರದ ಇತರ ಭಾಗಗಳಿಗೆ ಹರಡಲಿಲ್ಲ, ಬಹುಪಾಲು ಜನರು ಕೋಮುವಾದಿಗಳ ಪ್ರಚಾರಕ್ಕೆ ಓಗೊಡಲಿಲ್ಲ ಎಂಬ ಬಗ್ಗೆ ಪಿ.ಬಿ. ಹೇಳಿಕೆ ಸಮಾಧಾನ ವ್ಯಕ್ತಪಡಿಸಿದೆ. ಇಂತಹ ಸೂಕ್ಷ್ಮ ಪರಿಸ್ಥಿತಿಯಲ್ಲಿ 'ಧರ್ಮಜಾಗರಣ ಯಾತ್ರೆ' ನಡೆಸಲು ಅವಕಾಶ ನೀಡಿದ್ದು ಖಂಡನಾರ್ಹ ಎಂದಿರುವ ಪಿ.ಬಿ. ಉತ್ತರ ಪ್ರದೇಶದ ಮುಖ್ಯಮಂತ್ರಿಗಳು ದಂಗೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದರು ಎಂಬುದನ್ನು ಗಮನಿಸುತ್ತಾ ಯು.ಪಿ. ಸರ್ಕಾರ ಮತ್ತು ಜಿಲ್ಲಾ ಆಡಳಿತ ಇನ್ನು ಇಂತಹ ಘಟನೆಗಳಾಗದಂತೆ ಎಚ್ಚರಿಕೆ ವಹಿಸಬೇಕೆಂದು ಒತ್ತಾಯಿಸಿದೆ. ಸೇನೆಯ ಜಮಾವಣೆ ಇನ್ನು ಸ್ವಲ್ಪ ಸಮಯ ಮುಂದುವರಿಸುತ್ತಾ, ತನ್ನಧ್ಯೆ ಧರ್ಮದ ಸೋಗಿನಲ್ಲಿರುವ ಸಮಾಜ ವಿರೋಧಿ ಗುಂಪುಗಳ ವಿರುದ್ಧ ತೀವ್ರ ಕ್ರಮ ಕೈಗೊಳ್ಳಬೇಕೆಂದು ಆಗ್ರಹ ಪಡಿಸಿದೆ.

ಆನಂದ ಮಾರ್ಗಿ ಪಿತೂರಿ ಪರಿಣಾಮಕಾರಿ ತಡೆ ಕ್ರಮಗಳು ಅಗತ್ಯ

ಸಿ.ಪಿ.ಐ.(ಎಂ) ಮುಖಂಡರ ಕೊಲೆ ನಡೆಸುವ ಆನಂದಮಾರ್ಗಿಗಳ ಪಿತೂರಿಯ ಬಗ್ಗೆ ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೋ ತನ್ನ ತೀವ್ರ ಆತಂಕ ವ್ಯಕ್ತಪಡಿಸಿದೆ. ಕೇಂದ್ರಸರ್ಕಾರ ಅಮೃತಸರ ಘಟನೆಯನ್ನು ಗಂಭೀರವಾಗಿ ಪರಿಗಣಿಸಿ ಆಮೂಲಾಗ್ರ ತನಿಖೆ ನಡೆಸಬೇಕು. ಇಂತಹದೊಂದು ಪಿತೂರಿಯನ್ನು ವಿಫಲಗೊಳಿಸಲು ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕೆಂದು ಪಿ.ಬಿ. ಒತ್ತಾಯಿಸಿದೆ

ಸಾಮ್ರಾಜ್ಯಶಾಹಿಯೊಂದಿಗೆ ಸಂಪರ್ಕ ವಿರುವ ಆನಂದಮಾರ್ಗಿಯಂತಹ ಭಯೋತ್ಪಾದಕ ಸಂಘಟನೆ ಒಂದು ಧಾರ್ಮಿಕ ಸಂಘಟನೆಯ ಸೋಗಿನಲ್ಲಿ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬುಡಮೇಲು ಮಾಡಲು ಬಿಡಬಾರದು. ದೇಶದ ಪ್ರಜಾಪ್ರಭುತ್ವ ಜನಾಭಿಪ್ರಾಯ ಈ ಬಗ್ಗೆ ಧೃಢ ನಿಲುವು ತಳೆಯಬೇಕು. ಆಡಳಿತ ಜಾಗರೂಕವಾಗಿರಬೇಕು ಎಂದು ಪೊಲಿಟ್‌ಬ್ಯೂರೋ ಹೇಳಿದೆ.

ನಲ್ವತ್ತು ಲಕ್ಷ ಮಂದಿಗೆ ಅಕ್ಷರ ಕಲಿಸಲಿರುವ ಕೇರಳದ ಬೃಹತ್ ಸಾಮೂಹಿಕ ಆಂದೋಲನ

ಕೇರಳದ ಎಲ್.ಡಿ.ಎಫ್. ಸರ್ಕಾರದ ಪರವಾಗಿ ಆಗಸ್ಟ್ ೧೯ ರಂದು ವಿಧಾನ ಸಭೆಯಲ್ಲಿ ಮಾತನಾಡುತ್ತಾ ರಾಜ್ಯಪಾಲರು ೧೫-೩೫ ವಯೋಗುಂಪಿನಲ್ಲಿ ಎಲ್ಲರನ್ನು ೧೯೯೧ ರ ವೇಳೆಗೆ ಸಾಕ್ಷರರನ್ನಾಗಿಸುವ ಸರ್ಕಾರದ ಪ್ರಸ್ತಾವವನ್ನು ಘೋಷಿಸಿದರು. ಈ ಘೋಷಣೆಯ ಉದ್ದೇಶ ರಾಜ್ಯದಲ್ಲಿ ಸಾಕ್ಷರತಾ ಆಂದೋಲನವನ್ನು ಒಂದು ಬೃಹತ್ ಸಾಮೂಹಿಕ ಆಂದೋಲನವನ್ನಾಗಿ ಬೆಳೆಸುವುದು.

ಬೇರೆ ರಾಜ್ಯಗಳಂತೆ ಕೇರಳದಲ್ಲೂ ಕಾಂಗ್ರೆಸ್ ನೇತೃತ್ವದ ಸರ್ಕಾರಗಳು ಸಾಕ್ಷರತೆ ಹೆಚ್ಚಿಸಲು ಮಾಡಿದ ಪ್ರಯತ್ನ ಅತ್ಯಲ್ಪ. ೧೯೫೭-೫೯ರ ಮೊದಲ ಕಮ್ಯುನಿಸ್ಟ್ ಸರ್ಕಾರ ಜನಸಮೂಹಗಳು ನೇರವಾಗಿ ಭಾಗವಹಿಸುವ ಯೋಜನೆಯೊಂದನ್ನು ರೂಪಿಸಿತ್ತು. ಪಟ್ಟಭದ್ರ ಹಿತಾಸಕ್ತಿಗಳಿಂದಾಗಿ ಅದು ಜಾರಿಯಾಗಲಿಲ್ಲ. ೧೯೮೭ ರಲ್ಲಿ ಎಲ್.ಡಿ.ಎಫ್. ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಜನರು ಭಾಗವಹಿಸುವ ಹಲವಾರು ಅಭಿವೃದ್ಧಿ ಯೋಜನೆಗಳನ್ನು ಆರಂಭಿಸಿತು. ಸಾಕ್ಷರತಾ ಯೋಜನೆ ಇವುಗಳಲ್ಲಿ ಒಂದು.

ರಾಜ್ಯದ ಕೊಟ್ಟಾಯಂ ಪಟ್ಟಣ ಮೊದಲ ಪೂರ್ಣ ಸಾಕ್ಷರತಾ ಪಟ್ಟಣವೆಂದು ಹೆಸರಾಯಿತು. ನಂತರ ಎರ್ನಾಕುಳಂ ಪೂರ್ಣ ಸಾಕ್ಷರತೆಯ ದೇಶದ ಮೊದಲ ಜಿಲ್ಲೆಯಾಯಿತು. ಫೆಬ್ರವರಿ ೪ ರಂದು ಈ ಬಗ್ಗೆ ಅಧಿಕೃತ ಘೋಷಣೆ ಮಾಡಿದ ಪ್ರಧಾನ ಮಂತ್ರಿ ವಿ.ಪಿ.ಸಿಂಗ್ ರಾಜ್ಯದ ಬೃಹತ್ ಸಾಕ್ಷರತಾ ಆಂದೋಲನವನ್ನು ಉದ್ಘಾಟಿಸಿದರು.

೬೦ ವರ್ಷದ ಕೆಳಗಿನ ಎಲ್ಲ ಅನಕ್ಷರಸ್ತರನ್ನು ಸಾಕ್ಷರಗೊಳಿಸುವ ಬೃಹತ್ ಆಂದೋಲನವಿದು. ೪೦ ಲಕ್ಷ ಮಂದಿಗೆ ಇದರಿಂದ ಅಕ್ಷರ ಕಲಿಸಿದಂತಾಗುತ್ತದೆ.

ಎರ್ನಾಕುಳಂ ಜಿಲ್ಲೆಯ ೧ ಲಕ್ಷ ೬೦ ಸಾವಿರ ಅನಕ್ಷರಸ್ತರನ್ನು ಸಾಕ್ಷರಗೊಳಿಸಲು ೨೦ ಸಾವಿರ ಸ್ವಯಂ ಸೇವಕರು ಒಂದು ಪೈಸೆಯನ್ನೂ ತೆಗೆದುಕೊಳ್ಳದೆ ಎಂಟು ತಿಂಗಳ ಕಾಲ ಸರಕಾರೀ ಅಧಿಕಾರಿಗಳು, ಬುದ್ಧಿಜೀವಿಗಳು, ಜನ ಸಾಮಾನ್ಯರು ಹಗಲಿಗೆ ಹಗಲು ಕೊಟ್ಟು ದುಡಿದ ಅನುಭವ ಕೇರಳದ ಎಲ್.ಡಿ.ಎಫ್. ಸರ್ಕಾರಕ್ಕೆ ಬೃಹತ್ ಆಂದೋಲನ ಆರಂಭಿಸಲು ನೀಡಿದ ಸ್ಫೂರ್ತಿ. ರಾಷ್ಟ್ರೀಯ ಸಾಕ್ಷರತಾ ಮಿಶನ್ ಕೂಡಾ ಈ ಎರ್ನಾಕುಳಂ ಸಾಕ್ಷರತಾ ಪ್ರಚಾರ ಅತ್ಯಂತ ಪರಿಣಾಮಕಾರಿ ಹಾಗೂ ದಕ್ಷ ವಿಧಾನವೆಂದು ಇದನ್ನು ಮಾದರಿಯಾಗಿ ಸ್ವೀಕರಿಸಿದೆ.

ಪ್ರಸ್ತುತ ಆಂದೋಲನವನ್ನು ದಕ್ಷವಾಗಿ, ಪರಿಣಾಮಕಾರಿಯಾಗಿ ನಡೆಸಲು ಕೇರಳದ ಸಾಕ್ಷರತಾ ಸಮಿತಿ ರಚಿಸಲಾಗಿದೆ. ಮುಖ್ಯ ಮಂತ್ರಿಗಳು ಇದರ ಅಧ್ಯಕ್ಷರು. ಇದರಲ್ಲಿ ಮಂತ್ರಿಗಳು ಅಧಿಕಾರಿಗಳು, ರಾಜಕೀಯ ಮುಖಂಡರು, ಬುದ್ಧಿ ಜೀವಿಗಳು, ಪ್ರತಿಷ್ಠಿತ ವ್ಯಕ್ತಿಗಳು, ಜನಸಂಘಟನೆಗಳ ಪ್ರತಿನಿಧಿಗಳಿದ್ದಾರೆ. ವಿವಿಧ ಸಂಘಟನೆಗಳು, ಸ್ವಯಂ ಸೇವಾ ಸಂಘಟನೆಗಳ ಸಾಕ್ಷರತಾ ಚಟುವಟಿಕೆಗಳನ್ನೆಲ್ಲಾ ಈ ಸಮಿತಿಯ ಮೂಲಕ ಸಮನ್ವಯಗೊಳಿಸಲಾಗುತ್ತದೆ. ಸಮಿತಿಯ ದಿನದಿನದ ಚಟುವಟಿಕೆಗಳ ಉಸ್ತುವಾರಿಗೆ ೧೫ ಸದಸ್ಯರ ಕಾರ್ಯಕಾರಿ ಸಮಿತಿ ರಚಿಸಲಾಗಿದೆ. ಇದಕ್ಕೆ ಅಭಿವೃದ್ಧಿ ಮಂತ್ರಿ ಶಿವದಾಸ್ ಮೆನನ್ ಅಧ್ಯಕ್ಷರು. ಇದೇ ರೀತಿ ಜಿಲ್ಲಾ ಸಾಕ್ಷರತಾ ಸಮಿತಿಗಳನ್ನು ರಚಿಸಲಾಗಿದೆ. ಎಲ್ಲಿದರಲ್ಲೂ ಆಯಾಯ ಮಟ್ಟದ ಸರ್ಕಾರೀ ಅಧಿಕಾರಿಗಳೂ, ಚುನಾಯಿತ ಪ್ರತಿನಿಧಿಗಳು, ಬುದ್ಧಿ ಜೀವಿಗಳು ಹಾಗೂ ಸಾಮೂಹಿಕ ಸಂಘಟನೆಗಳ ಪ್ರತಿನಿಧಿಗಳಿರುತ್ತಾರೆ. ಇವೆಲ್ಲಾ ಸಮಿತಿಗಳು ಈಗಾಗಲೇ ಕಾರ್ಯಾರಂಭ ಮಾಡಿವೆ.

ಈ ಆಂದೋಲನಕ್ಕೆ ಬೇಕಾದ ಸರಂಜಾಮುಗಳನ್ನು ಅಂದರೆ ಶಿಕ್ಷಣ ಸಾಮಗ್ರಿಗಳ ವಿತರಣೆ, ಶಿಕ್ಷಕರ ತರಬೇತಿ, ಉಸ್ತುವಾರಿ, ಸಾಕ್ಷರತಾ ತರಗತಿಗಳು ಇತ್ಯಾದಿಗಳನ್ನು ನೋಡಿಕೊಳ್ಳಲು ಸರ್ಕಾರದ ಕಾರ್ಯದರ್ಶಿಯ ನೇತೃತ್ವದಲ್ಲಿ ಒಂದು ಕೇಂದ್ರ ಕಚೇರಿ ಕಾರ್ಯಾರಂಭ ಮಾಡಿದೆ. ಜಿಲ್ಲಾ ಕಚೇರಿಯಡಿ ಪ್ರತಿ ೭೫ ಸಾವಿರ ನಿರಕ್ಷರಸ್ತರಿಗೆ ಒಂದರಂತೆ ಪ್ರಾಜೆಕ್ಟ್ ಆಫೀಸ್ ತೆರೆಯಲಾಗಿದೆ. ಪ್ರತಿ ಪ್ರಾಜೆಕ್ಟನ್ನು ೨೦ ಉಪಯೋಜನೆಗಳಾಗಿ ವಿಂಗಡಿಸಲಾಗಿದೆ.

"ಸಾಕ್ಷರ ಕೇರಳ, ಸುಂದರ ಕೇರಳ"

ಸಾಕ್ಷರತಾ ಪ್ರಚಾರದ ಅರಿವು ಮೂಡಿಸಲು ಮೊದಲು ಏಪ್ರಿಲ್ ೪,೫,೬ ರಂದು ರಾಜ್ಯಾದ್ಯಂತ ಸಾವಿರಾರು ಅಕ್ಷರ ಜಾಥಾ ನಡೆಸಲಾಯಿತು. ಏಪ್ರಿಲ್ ೭ ರಂದು ಪ್ರತಿವಾರ್ಡಿನಲ್ಲಿ "ಸಾಕ್ಷರ ಕೇರಳ, ಸುಂದರ ಕೇರಳ" ಎಂಬ ಸಾಕ್ಷರತಾ ಗೋಡೆ ರಚಿಸಲಾಯಿತು. ಏಪ್ರಿಲ್ ೮ ರಂದು ಬೆಳಿಗ್ಗೆ ಸಾಕ್ಷರತಾ ಬಾವುಟ ಹಾರಿಸಿ ಅನಕ್ಷರಸ್ತರ ಸರ್ವೆ ಆರಂಭವಾಯಿತು. ಪ್ರತಿ ೫೦ಮನೆಗೆ ಒಂದರಂತೆ ಒಂದು ಲಕ್ಷ ಸ್ಕ್ವಾಡ್‌ಗಳು ಕೆಲಸ ಮಾಡಿ ಒಂದು ದಿನದಲ್ಲೇ ಸರ್ವೆ ಕೆಲಸ ಮುಗಿಸಿದವು. ಇದರ ಬಗ್ಗೆ ಸ್ವಯಂ ಸೇವಕರಿಗೆ ಮೊದಲೇ ತರಬೇತಿ ನೀಡಲಾಗಿತ್ತು. ಮುದ್ರಿತ ಫಾರಂಗಳನ್ನು ನೀಡಲಾಗಿತ್ತು.

ಸರ್ವೆಯ ಫಲಿತಾಂಶ ತಿಳಿದ ಕೂಡಲೇ ಯೋಜನೆಗಳ, ಉಪಯೋಜನೆಗಳ ಪ್ರದೇಶಗಳನ್ನು ಗುರುತಿಸಲಾಯಿತು. ನಾಲ್ಕು ಲಕ್ಷ ಶಿಕ್ಷಕರು, ಇವರಿಗೆ ತರಬೇತಿ ನೀಡಲು ೨೫ ಸಾವಿರ ಮಾಸ್ಟರ್ ಟ್ರೈನರ್‌ಗಳು, ಮಾಸ್ಟರ್ ಟ್ರೈನರ್‌ಗಳಿಗೆ ತರಬೇತಿ ನೀಡಲು ೧೫೦೦ ಸಂಪನ್ಮೂಲ ವ್ಯಕ್ತಿಗಳೂ ಅವರಿಗೆ ಮಾರ್ಗದರ್ಶನ ನೀಡಲು ೧೫೦ ಪ್ರಮುಖ ವ್ಯಕ್ತಿಗಳನ್ನು (ಕೀಪರ್ಸನ್ಸ್) ಭರ್ತಿ ಮಾಡಿಕೊಳ್ಳಲಾಗುತ್ತಿದೆ.

ಶಿಕ್ಷಕರ ತರಬೇತಿಯ ನಂತರ ಅನಕ್ಷರಸ್ತರಿಗೆ ತರಗತಿಗಳು ಆರಂಭವಾಗುತ್ತವೆ. ವಾರ್ಡ್ ಸಾಕ್ಷರತಾ ಸಮಿತಿಗಳು ಇದರ ಉಸ್ತುವಾರಿ ನೋಡಿಕೊಳ್ಳುತ್ತವೆ.

ಈ ಎಲ್ಲಾ ಚಟುವಟಿಕೆಗಳಲ್ಲಿ ಎಲ್ಲಾ ಹಂತಗಳಲ್ಲಿ ಜನ ಇದರಲ್ಲಿ ಸಕ್ರಿಯವಾಗಿ ಪಾಲುಗೊಳ್ಳುವ ವ್ಯವಸ್ಥೆಯಿದೆ. ಇದೇ ಈ ಬೃಹತ್ ಆಂದೋಲನದ ಜೀವಾಳ ಕೂಡಾ. ರಾಜ್ಯ ಡಿ.ವೈ.ಎಫ್.ಐ. ತನ್ನ ಅಭಿವೃದ್ಧಿ ಬ್ರಿಗೇಡ್‌ಗಳನ್ನು ಈ ಉದ್ದೇಶಕ್ಕೆ ನೀಡಲು ಈಗಾಗಲೇ ನಿರ್ಧರಿಸಿದೆ.

ಆಕಾಶಕ್ಕೇರಿಸಿದ ಅಕ್ಷರವಂತಿಕೆಯ ರೆಕ್ಕೆ

ಅರವತ್ತರ ಅಂಚಿನಲ್ಲಿರುವ ಶ್ರೀಮತಿ ಬೇಬಿ ಆದೇ ತಾನೇ ರೆಕ್ಕೆ ಬಲಿತು ಆಕಾಶಕ್ಕೆ ಹಾರುವಷ್ಟು ಉತ್ಸಾಹದಿಂದ ಅಕ್ಕಪಕ್ಕದ ಮನೆಯವರನ್ನೆಲ್ಲಾ ಕೈ ಬೀಸಿ ಕರೆಯುತ್ತಿದ್ದಳು. ಸೇರಿದ ಜನಸಂದಣಿ ಯೆದುರು ತನಗೆ ದೂರದ ಸೌದಿ ಅರೇಬಿಯಾದಿಂದ ಅಳಿಯ ಜಾರ್ಜ್ ಬರೆದ ಪತ್ರವನ್ನು ತಡವರಿಸುತ್ತಾ ಗಟ್ಟಿಯಾಗಿ ಓದತೊಡಗಿದಳು. ವಿದೇಶದಿಂದ ಪತ್ರ ಬಂದುದೇನೂ ವಿಶೇಷವಲ್ಲ. ಹಿಂದೆಯೂ ಎಷ್ಟೋ ಪತ್ರಗಳು ಬಂದಿವೆ. ಬಂದ ಪತ್ರಗಳನ್ನೆಲ್ಲಾ ಪಕ್ಕದ ಮನೆಯವರು ಓದುವಾಗ ಪಿಳಿ ಪಿಳಿ ಕಣ್ಣಿಟ್ಟುಕೊಂಡು ಒಳ್ಳೆಯ ಚಿಕ್ಕ ಸುರುಳಿಯಂತಿದ್ದ ಚಿತ್ತಾರದ ತುಣುಕುಗಳನ್ನು ಅಸಹಾಯಕತೆಯಿಂದ ದಿಟ್ಟಿಸಿ ನಿಟ್ಟುಸಿರುಬಿಡುತ್ತಾ ಬಂದಿದ್ದಾಳೆ. ಆದರೆ ಈಗ ಹಾಗಿಲ್ಲ. ತಾನೇ ಓದಬಲ್ಲಳು ಬರೆಯಬಲ್ಲಳು. ಸ್ವತಃ ಕೈಯಾರೆ ತಾನೇ ಬರೆದ ಪತ್ರಕ್ಕೆ ಇದು ಉತ್ತರಿಸಿದ ಪತ್ರವಾಗಿತ್ತು. ಸ್ಥಳೀಯವಾಗಿ ನಡೆಸಿದ ಸಾರ್ವಜನಿಕ ಪರೀಕ್ಷೆಯಲ್ಲಿ ಪಾಸಾಗಿದ್ದಳು.

ಆತ ಬರೆದಿದ್ದ..... ಎರ್ನಾಕುಲಂ ಜಿಲ್ಲೆಯು ನೂರಕ್ಕೆ ನೂರರಷ್ಟು ಸಾಕ್ಷರತೆ ಹೊಂದಿದ್ದು ತಿಳಿದು ನನಗೆ ಅತೀವ ಸಂತೋಷವಾಗಿದೆ. ಇದು ಸಾಧ್ಯವೇ ಎಂದು ಅನುಮಾನವಿತ್ತು. ನಿಮ್ಮ ಕೈ ಬರಹದ ಪತ್ರ ನನಗೆ ಖಾತ್ರಿ ತಂದಿತು. ಈ ಸಂಗತಿ ನನ್ನ ಸ್ನೇಹಿತರೆಲ್ಲರಿಗೂ ಕೌತುಕ ತಂದಿದೆ. ನಿಮಗೆ ಅಕ್ಷರ ಕಲಿಸಿದ ಪಕ್ಕದ ಮನೆಯ ಶ್ರೀಮತಿ ಇ.ಕೆ.ಎನ್. ಗೀತಾರಾಜನ್‌ರವರಿಗೆ ಮತ್ತು ಆ ಮೂಲಕ ಎಲ್ಲಾ ಸ್ವಯಂ ಸೇವಕರಿಗೆ, ಸರ್ಕಾರಕ್ಕೂ ನನ್ನ ಹೃತ್ಪೂರ್ವಕ ಅಭಿನಂದನೆಗಳು..."

ಹೌದು! ಕೇರಳದ ಎರ್ನಾಕುಲಂ ಜಿಲ್ಲೆಯಲ್ಲಿ ಸಾಧಿಸಿದ ಪೂರ್ಣ ಅಕ್ಷರವಂತಿಕೆ ಅದರ ಅನುಭವಗಳು ಪುಳಕವನ್ನುಂಟು ಮಾಡುತ್ತವೆ. ಸಹಸ್ರ ಸಹಸ್ರ ವಿದ್ಯಾವಂತ ಯುವಜನರು ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್‌ನೊಂದಿಗೆ ಶ್ರಮಿಸಿದ ಫಲವಾಗಿ ಕಣ್ಣಿದ್ದು ಕುರುಡರಾಗಿದ್ದು, ಅಸಹಾಯಕತೆ ಕೀಳರಿಮೆಯಿಂದ ಕುಗ್ಗಿ ಹೋಗಿದ್ದ ಲಕ್ಷ ಲಕ್ಷ ಜನರಿಗೆ ಸ್ವಾಭಿಮಾನ ದೃಢನಂಬಿಕೆ ನೀಡಿ ಬದುಕಿನಲ್ಲಿ ಬದಲಾವಣೆಗಾಗಿ ಸನ್ನದ್ಧರಾಗುವಂತೆ ಶ್ರಮಿಸಿದ್ದಾರೆ. ಮಾನವ ಸಂಪನ್ಮೂಲವನ್ನು ಸಾಮಾಜಿಕ ಸಾಂಸ್ಕೃತಿಕ ಪಿಡುಗುಗಳನ್ನು ಹೊಡೆದೋಡಿಸಲು ಸಮರ್ಥವಾಗಿ ಬಳಸಿದ ಕ್ರಾಂತಿಕಾರಿ ದೃಷ್ಟಿಕೋನದ ಕೊಡುಗೆಯ ಫಲವಿದು.

— ಎಸ್.ವೈ. ಗುರುಶಾಂತ್, ರಾಜನ್

ಬೀಡಿ ಕಾರ್ಮಿಕರ ವಿಜಯ

ಕರ್ನಾಟಕ ಸರಕಾರ ನಿಗದಿ ಪಡಿಸಿದ ಕನಿಷ್ಠ ಕೂಲಿ ವೇತನ ನೀಡುವಂತೆ ಒತ್ತಾಯಿಸಿದ ಕಾರಣ, ಹಳೇ ಹುಬ್ಬಳ್ಳಿಯಲ್ಲಿರುವ ಮೆ: ದರಬಾರ ಬೀಡಿ ಉದ್ಯಮದ ಆಡಳಿತ ವರ್ಗವು ೧೦ ಜನ ಹಿರಿಯ ಕೆಲಸಗಾರರ ಮೇಲೆ ಸುಳ್ಳು ಆರೋಪಗಳನ್ನು ಹೊರಿಸಿ ತಾ। ೧೬-೮-೮೫ ರಂದು ಕೆಲಸದಿಂದ ಕಿತ್ತು ಹಾಕಿದ್ದರು.

ಈ ಕೆಲಸಗಾರರು ಸಿ.ಐ.ಟಿ.ಯು ನಾಯಕತ್ವವನ್ನು ಕಂಡು ನ್ಯಾಯ ದೊರಕಿಸಿಕೊಡಲು ಕೇಳಿದರು. ಸದರಿ ವಿವಾದವನ್ನು ತೆಗೆದುಕೊಂಡ ಸಿಐಟಿಯು ಅನೇಕ ಹೋರಾಟಗಳನ್ನು ನಡೆಸಿದ್ದಾಗ್ಯೂ ಪುನರ್ ನೇಮಕದ ಆದೇಶ ಹೊರಡಿಸಿರಲಿಲ್ಲ. ಅನಂತರ ಅಮರಣಾಂತ ಉಪವಾಸವನ್ನು ಸಿಐಟಿಯು ನಾಯಕರು, ಹಾಗೂ ಕಾರ್ಮಿಕರು, ತೆಗೆದುಕೊಂಡರು. ನಂತರ ಸದರಿ ಉಪ ಕಾರ್ಮಿಕ ಆಯುಕ್ತರು ಮತ್ತು ಅಪಿಲೇಟ ಅಥಾರಿಟ ಪ್ರಾಧಿಕಾರಿಗಳು ಕೂಡಲೆ ಅಮರಣಾಂತ ಉಪವಾಸ ಕೈ ಬಿಡುವಂತೆ ಹಾಗೂ ತಾವು ವಿವಾದವನ್ನು ವಿಚಾರಣೆಗೆ ತೆಗೆದುಕೊಳ್ಳುವ ಆಶ್ವಾಸನೆ ನೀಡಿದರು ಈ ಹಿನ್ನೆಲೆಯಲ್ಲಿ ಅಮರಣಾಂತ ಉಪವಾಸವನ್ನು ನಿಲ್ಲಿಸಲಾಯಿತು.

ಮುಷ್ಕರ ನಿರತ ನೌಕರರಿಂದ ಮೆರವಣಿಗೆ ಹಾಗೂ ಬಹಿರಂಗಸಭೆ

ದಿನಾಂಕ ೨೨-೦೩-೯೦ರಿಂದ ಅನಿರ್ದಿಷ್ಟ ಅವಧಿಯ ಮುಷ್ಕರಕ್ಕಿಳಿದಿದ್ದ ಹಿಂದ್ ಮಾತಾ ನೌಕರರು ಹಾಗೂ ಕಾರ್ಮಿಕರು ತಾ।೪-೪-೯೦ರಂದು ಮೆರವಣಿಗೆ ಹಾಗೂ ಬಹಿರಂಗ ಸಭೆಯನ್ನು ಏರ್ಪಡಿಸಿದ್ದರು.

ಧಾರವಾಡ ಜಿಲ್ಲಾ ಜನರಲ್ ಎಂಪ್ಲಾಯಿಸ್ (ಸಿ.ಐ.ಟಿ.ಯು ಸಂಯೋಜಿತ)ನ ಅಡಿಯಲ್ಲಿ ಹಿಂದಮಾತ ನೌಕರರು ತಮ್ಮ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ಮುಷ್ಕರ ನಿರತರಾಗಿದ್ದು, ಅದರ ಆಡಳಿತ ವರ್ಗದ ಮೌನ ಅವರನ್ನು ರೊಚ್ಚಿಗೆಬ್ಬಿಸಿದೆ. ಸಿ.ಐ.ಟಿ.ಯು ರಾಜ್ಯ ಘಟಕದ ಕಾರ್ಯದರ್ಶಿ ಕಾಂ। ಎಂ.ಬಿ. ಕಟ್ಟಿಯವರು ಬಹಿರಂಗ ಸಭೆಯಲ್ಲಿ ಮಾತನಾಡುತ್ತಾ ಜೀವನಾವಶ್ಯಕ ಕೂಲಿ ಕೊಡಲು ನಿರಾಕರಿಸುತ್ತಿರುವ ಹಿಂದಮಾತಾ ಇಂಡಸ್ಟ್ರೀಸ್ ಕಲಘಟಗಿಯ ಆಡಳಿತ ವರ್ಗಕ್ಕೆ ಉದ್ದಿಮೆ ನಡೆಸುವ ಹಕ್ಕಿಲ್ಲವೆಂದು ತಿಳಿಸಿದ್ದಾರೆ. ಈ ಬೇಡಿಕೆಗಳ ಈಡೇರಿಕೆಯ ಹೋರಾಟಕ್ಕೆ ಎಲ್ಲಾ ನಾಗರೀಕರು ಬೆಂಬಲ ನೀಡಬೇಕೆಂದು ವಿನಂತಿಸಿದ್ದಾರೆ.


ಸಂಕ್ಷಿಪ್ತ ಸುದ್ದಿಗಳು

ನಿರುದ್ಯೋಗ ಭತ್ತೆಗಾಗಿ ಧರಣಿ

ಡಿ.ವೈ.ಎಫ್.ಐ. ವಿಜಾಪುರ ಜಿಲ್ಲಾ ಸಮಿತಿಯು, ನಿರುದ್ಯೋಗಿಗಳಿಗೆ ಮಾಸಿಕ ಭತ್ತೆಯನ್ನು ನೀಡುವಂತೆ ಒತ್ತಾಯಿಸಿ ೨೮-೩-೯೦ ರಂದು ಧರಣಿ ಆಚರಿಸಿತು.

ಇಂದು ನಮ್ಮ ದೇಶದಲ್ಲಿ ನಿರುದ್ಯೋಗ ಬೃಹದಾಕಾರವಾಗಿ ಬೆಳೆಯುತ್ತಿರುವ ಸಂದರ್ಭದಲ್ಲಿ, ಕೇಂದ್ರ ಸರಕಾರವು ಸಂವಿಧಾನದಲ್ಲಿ ಉದ್ಯೋಗದ ಹಕ್ಕನ್ನುಸೇರಿಸುವುದಾಗಿ ಹೇಳಿದೆ. ಆದರೆ ನಮ್ಮ ಉದ್ಯೋಗ ವಿನಿಮಯ ಕಛೇರಿಯಲ್ಲಿ ಯುವಕರು ಹೆಸರು ನೊಂದಾಯಿಸಿ ಕೆಲಸಕ್ಕಾಗಿ ಅಲೆಯುತ್ತಿದ್ದಾರೆ. ಆದ್ದರಿಂದ ಕೇರಳ, ಪಶ್ಚಿಮ ಬಂಗಾಳ, ಹರಿಯಾಣಗಳಲ್ಲಿ ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ತೆ ಕೊಡುತ್ತಿರುವಂತೆ, ನಿರುದ್ಯೋಗ ಭತ್ತೆಯನ್ನು ನೀಡಬೇಕೆಂದು ಜಿಲ್ಲಾಧಿಕಾರಿ ಕಛೇರಿ ಮುಂದೆ ಧರಣಿ ಆಚರಿಸಲಾಯಿತು. ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯ ಮಂತ್ರಿಗಳಿಗೆ ಮನವಿಯೊಂದನ್ನು ಅರ್ಪಿಸಲಾಯಿತು.





ಬ್ರಿಟನ್: ಥ್ಯಾಚರ್‌ರ "ಸುಧಾರಿತ ಬಂಡವಾಳಶಾಹಿ" ಕುಸಿಯುತ್ತಿದೆ.

ಮಾರ್ಚ್, 31 ರಂದು ಬ್ರಿಟನ್ನಿನ ಪ್ರಧಾನಿ ನಿವಾಸ 10, ಡೌನಿಂಗ್ ಸ್ಟ್ರೀಟ್‌ನ ಎದುರು ಹಾಗೂ ಲಂಡನ್ನಿನ ಸುಪ್ರಸಿದ್ಧ ಟ್ರಾಫಲ್ಗರ್ ಚೌಕದೆದುರು 2 ಲಕ್ಷ ಜನರ ಒಂದು ದೊಡ್ಡ ಮತ ಪ್ರದರ್ಶನ ನಡೆಯಿತು. ಕುದುರೆ ಸವಾರ ಪೋಲೀಸರು ಇವರ ಮೇಲೆ ಅಮಾನುಷ ಹಲ್ಲೆ ನಡೆಸಿದರು. ಪೋಲೀಸರು, ಜನರ ನಡುವಿನ ಘರ್ಷಣೆ 12 ಗಂಟೆ ನಡೆಯಿತು. 400 ಜನ ಗಾಯಗೊಂಡರು, 341 ಜನರನ್ನು ಬಂಧಿಸಲಾಯಿತು.

ಈ ತೀವ್ರ ಪ್ರತಿಭಟನೆ ನಡೆದದ್ದು ಥ್ಯಾಚರ್ ಸರ್ಕಾರದ ಇತ್ತೀಚಿನ ಶ್ರೀಮಂತ ಪರ ಕ್ರಮವೊಂದರ ವಿರುದ್ಧ. ಇತ್ತೀಚೆಗೆ ಥ್ಯಾಚರ್ ಸರಕಾರ ಹೊಸ ಮನೆ ತೆರಿಗೆ ಅಥವಾ ಪೋಲ್‌ಟ್ಯಾಕ್ಸ್ ಹೇರಿತು. ಫ್ಲಾಟ್‌ಗಳು, ಮನೆಗಳು, ಅಂಗಡಿಗಳು, ಮಹಲುಗಳ ಮೇಲೆ ಹಾಕಿದ ಈ ತೆರಿಗೆಯ ವಿಶೇಷವೆಂದರೆ ಇದು ಆಯಾಯ ಸ್ಥಾನದ ಆಕಾರದ ಮೇಲೆ ಹೊಂದಿಕೊಂಡಿಲ್ಲ. ಬದಲಾಗಿ ಅಲ್ಲಿ ವಾಸಿಸುವ ಜನಗಳ ಸಂಖ್ಯೆಯ ಮೇಲೆ ಅವಲಂಬಿಸಿದೆ. ಅಂದರೆ ಒಂದು ಸಣ್ಣ ಗುಡಿಸಲಿನಲ್ಲಿ 10 ಮಂದಿಯಿದ್ದರೆ ಆ ಕುಟುಂಬ, ದೊಡ್ಡ ಮಹಲಿನಲ್ಲಿ ವಾಸಿಸುವ ಇಬ್ಬರೇ ಸದಸ್ಯರ ಕುಟುಂಬದ 5 ಪಟ್ಟು ತೆರಿಗೆ ನೀಡಬೇಕು. ವಾಸ್ತವವಾಗಿ ಇದು ಥ್ಯಾಚರ್ ಸರ್ಕಾರದ ಶ್ರೀಮಂತ ಪರ ನೀತಿಗಳ ಸರಣಿಯಲ್ಲಿ ಇತ್ತೀಚಿನ ಉದಾಹರಣೆ ಮಾತ್ರ. ಆದರೆ ಥ್ಯಾಚರ್ ಬಂಡವಾಳಶಾಹಿಯ ಶ್ರೀಮಂತ-ಪರ, ಜನ ವಿರೋಧಿ ಗುಣವನ್ನು ಕಣ್ಣು ಕುಕ್ಕುವಂತೆ ತೋರಿದ ಕ್ರಮ.

ಉಕ್ಕು, ಕಲ್ಲಿದ್ದಲು, ವಿದ್ಯುತ್, ಹೀಗೆ ಒಂದೊಂದಾಗಿ ಖಾಸಗೀಕರಿಸಿದ ಥ್ಯಾಚರ್ ಸರಕಾರ ಕೊನೆಗೆ ಕುಡಿಯುವ ನೀರನ್ನು ಖಾಸಗೀಕರಿಸಿತು! ಇತ್ತೀಚೆಗೆ ಎರಡು ಖಾಸಗೀ ನೀರು ಕಂಪನಿಗಳು ನೀರಿನ ಬೆಲೆಯನ್ನು 12% ಏರಿಸಿದವು. ಅನಿಲ ಪೂರೈಕೆಯ ಖಾಸಗೀ ಕಂಪೆನಿ ಅನಿಲದ ಬೆಲೆಯಿನ್ನು 7.5% ಏರಿಸಿತು. ಒಂದು ಕಾಲದಲ್ಲಿ ಆಧುನಿಕ 'ಕಲ್ಯಾಣ ಪ್ರಭುತ್ವ'ದ ಆದರ್ಶಪ್ರಾಯ ಮಾದರಿ ಎಂದೂ 'ಬಂಡವಾಳಶಾಹಿ' ಯಲ್ಲೂ ಜನರ ಕಲ್ಯಾಣ ಸಾಧ್ಯ ಎಂಬುದಕ್ಕೆ ಸಾಕ್ಷಿಯೆಂದು ಹೇಳುತ್ತಿದ್ದ ಬ್ರಿಟಿಷ್ ಆರೋಗ್ಯ ವ್ಯವಸ್ಥೆ ಈಗ ಲಾಭಕೋರರ ಮರ್ಜಿಗೆ ಬಿದ್ದಿದೆ. 8 ಲಕ್ಷ 77 ಸಾವಿರ ಮಂದಿ ಆಸ್ಪತ್ರೆಗಳಿಗೆ ಪ್ರವೇಶ ಪಡೆಯಲು ಕ್ಯೂನಲ್ಲಿದ್ದಾರೆ ಎಂದು ಬ್ರಿಟನ್ನಿನ ನ್ಯೂಸ್‌ವೀಕ್ ಪತ್ರಿಕೆ ತಿಳಿಸಿದೆ. ಇವರಲ್ಲಿ 42% ಒಂದು ವರ್ಷಕ್ಕೂ ಹೆಚ್ಚು ಕಾಲ ಕ್ಯೂನಲ್ಲಿದ್ದಾರೆ.

ಲಂಡನ್ನಿನಲ್ಲಿ 3.7 ಲಕ್ಷ ಮನೆ ಮಾರಿಲ್ಲದ ನಿರ್ಗತಿಕರು. ಇವರಲ್ಲಿ 50 ಸಾವಿರ 25 ವರ್ಷಕ್ಕಿಂತ ಕಡಿಮೆ ಹರೆಯದವರು ಶಾಲಾ ಶಿಕ್ಷಣವೂ ಅಸ್ತವ್ಯಸ್ತಗೊಂಡಿದೆ. 60% ದಷ್ಟು ವಿದ್ಯಾರ್ಥಿಗಳು 16 ವರ್ಷವಾಗುವ ಮೊದಲೇ ಶಾಲೆ ಬಿಡುತ್ತಾರೆ.

ಮಾರ್ಚ್ 31 ರ ಮತ ಪ್ರದರ್ಶನದಲ್ಲಿ ಪೋಲೀಸರೊಂದಿಗೆ ಕಾದಾಡಿದವರಲ್ಲಿ ಬಹು ಮಂದಿ 17 ರಿಂದ 25 ವರ್ಷದ ಒಳಗಿನವರು ಎಂಬುದು ಗಮನಾರ್ಹ. ಈ ಮತ ಪ್ರದರ್ಶನ ಕೇವಲ ಮನೆ ತೆರಿಗೆಯ ವಿರುದ್ಧ ಮತ ಪ್ರದರ್ಶನ ಮಾತ್ರವಾಗಿರಲಿಲ್ಲ. ಥ್ಯಾಚರ್‌ರ ಶ್ರೀಮಂತ ಪರ ನೀತಿಗಳ ವಿರುದ್ಧ ಬೆಳೆಯುತ್ತಿದ್ದ ಅಸಂತುಷ್ಟಿಯ ಒಟ್ಟು ಅಭಿವ್ಯಕ್ತಿ. ಬಂಡವಾಳಶಾಹಿಯನ್ನು ಸುಧಾರಿಸಬಹುದೆಂಬ ಮಿಥ್ಯೆಯ ಗುಳ್ಳೆಯೊಡೆದುದರ ಸಂಕೇತ.

ಮತ್ತೆ ಸೂಪರ್ 301

ಕಳೆದ ವರ್ಷ ಅಮೆರಿಕಾ ಸರಕಾರ ಭಾರತವನ್ನು "ಅನ್ಯಾಯ ಪೂರ್ಣ ವ್ಯಾಪಾರ ಪಾಲುದಾರ" ದೇಶ ಎಂದು ಪಟ್ಟಿ ಮಾಡಿ ತನ್ನ ಕಾನೂನುಗಳ ಸೂಪರ್ 301, ಸ್ಪೆಶಲ್ 301 ವಿಧಿಗಳನ್ನು ಬಳಸುವ ಬೆದರಿಕೆ ಹಾಕಿದ್ದು ಕೇವಲ ಮಾತಿನಲ್ಲಷ್ಟೇ, ಕೃಯಲ್ಲಿ ಅಮೆರಿಕನ್ ಸರಕಾರ ಏನೂ ಮಾಡುವುದಿಲ್ಲ ಎಂಬ ಅಮೆರಿಕಾ ಪರ ವ್ಯಕ್ತಿಗಳ ಭ್ರಮೆ ಕರಗಿದೆ. ಕಳೆದ ವರ್ಷ ಸೂಪರ್ 301 ಕತ್ತಿ ತೋರಿದ ಅದೇ ಕಾರ್ಲಾ ಹಿಲ್ಸ್ ಭಾರತದ ಉದ್ದಿಮೆಗಾರರ ಹಾಗೂ ಭಾರತ ಸರ್ಕಾರದ ಹಣಕಾಸು ಕಾರ್ಯದರ್ಶಿಯೂ ಇದ್ದ ಒಂದು ನಿಯೋಗ ಸ್ಪಷ್ಟವಾಗಿ, ಅಲ್ಲ, ಅತ್ಯಂತ ಕಠೋರ ದನಿಯಲ್ಲಿ ಎಚ್ಚರಿಸಿದ್ದಾರೆ - "ನಿಮ್ಮ ಜೀವ ವಿಮೆ, ಬ್ಯಾಂಕ್ ಮತ್ತಿತರ ರಂಗಗಳನ್ನು ನಮಗೆ ತೆರಿದಿಡಿ. ನೀವು ಹಾಕಿರುವ ಮಿತಿಗಳನ್ನೆಲ್ಲಾ ತೆಗೆದು ಹಾಕಿ. ಇಲ್ಲವಾದರೆ... ಇದೇ ಏಪ್ರಿಲ್ 5 ರಂದು.

ವಾಸ್ತವವಾಗಿ ಈಗಿರುವ 'ಮಿತಿ'ಗಳು ಅಷ್ಟಲ್ಲ, ದೇಶದ ಕೈಗಾರಿಕಾ ಬೆಳವಣಿಗೆಯ ದೇಶದ ಅಧಿಕಾರ, ದುಡಿಮೆಗಾರರ ಹಿತಾಸಕ್ತಿ ಕಾಪಾಡಲು ಬೇಕಾದ ಕನಿಷ್ಠ 'ಮಿತಿ' ಗಳಷ್ಟೇ ಇವು. ಹಿಂದಿನ ಕಾಂಗ್ರೆಸ್ ಸರಕಾರದ 'ಉದಾರೀಕರಣ' ನೀತಿ ಅಮೆರಿಕನ್ ಸರಕಾರವನ್ನು ತೃಪ್ತಿಪಡಿಸಬಹುದೆಂಬ ಕೆಲವರ ಎಣಿಕೆಯೂ ಹುಸಿಯಾಗಿದೆ. ಅಮೆರಿಕಾಕ್ಕೆ ಬೇಕಾಗಿರುವುದು ಭಾರತದಂತಹ ದೊಡ್ಡ ದೇಶ, ತೈವಾನ್, ಹಾಂಗ್‌ಕಾಂಗ್‌ಗಳಂತಹ ಪುಟ್ಟ ದೇಶಗಳಂತೆ ಮರು ಮಾತಿಲ್ಲದೆ ತನಗೆ ಶರಣಾಗುವುದು, ತನ್ನ 'ಸಲಹೆ'ಗಳ ವೇಷ ತೊಟ್ಟ ಆಜ್ಞೆಗಳನ್ನು ಮರುಮಾತಿಲ್ಲದೆ ಪಾಲಿಸುವುದು! ಭಾರತದ ಸಾರ್ವಭೌಮತೆ ಅಮೆರಿಕಾದ ಆಜ್ಞಾನುವರ್ತಿಯಾಗಬೇಕು!

ರಾಷ್ಟ್ರೀಯ ರಂಗ ಸರ್ಕಾರ ಈ ಅವಮಾನಕಾರೀ ಬೆದರಿಕೆಗೆ ತಕ್ಕ ಪ್ರತಿಕ್ರಮ ಕೈಗೊಳ್ಳಬೇಕು. ಅದನ್ನು ತಣ್ಣಗೆ ಉಪೇಕ್ಷಿಸಲು ಪ್ರಯತ್ನಿಸಬಾರದು.

ಪೋಲಿಷ್ ರೈತ ಪಕ್ಷದ ಎಚ್ಚರಿಕೆ

ಪೋಲೀಷ್ ಪುನಜನ್ಮ ರೈತ ಪಕ್ಷ ಅಲಿಲನ ಸಾಲಿಡಾರಿಟಿ ಸರಕಾರವನ್ನು ಬೆಂಬಲಿಸುತ್ತಿದ್ದ ಒಂದು ಪಕ್ಷ.ಆದರೆ ಇತ್ತೀಚೆಗಷ್ಟೆ ಆ ಪಕ್ಷದ ಸರ್ವೋಚ್ಚ ಕಾರ್ಯಕಾರಿ ಸಮಿತಿ ಪೋಲಂಡಿನಲ್ಲಿ ಆರ್ಥಿಕ ಪರಿಸ್ಥಿತಿ ಈ ವರ್ಷ ಹದಗೆಟ್ಟಿದೆ ಎಂದು ಟೀಕಿಸಿದೆ. ರಾಷ್ಟ್ರೀಯ ಆದಾಯ, ಉತ್ಪಾದನೆ, ನಿರುದ್ಯೋಗ ಸಾಮಾಜಿಕ, ವೈಯಕ್ತಿಕ ಬಡತನ ಹೆಚ್ಚಿದೆ ಎಂದು ಹೇಳಿದೆ. ಜನರ ಜೀವನ ಮಟ್ಟ ಕಾಪಾಡಲು ಆಮದಿನ ಮೇಲೇನೆ ಹೊಂದಿಕೊಳ್ಳಬೇಕಾಗುತ್ತದೆ ಎಂದು ಭವಿಷ್ಯ ನುಡಿದಿದೆ.

ತನ್ನ ಸಲಹೆಗಳನ್ನು ಗಮನಕ್ಕೆ ತಗೊಳ್ಳದ ಸಾಲಿಡಾರಿಟಿ ನೇತೃತ್ವದ ಸರಕಾರದ ಧೋರಣೆಗಳ ದುಷ್ಫಲಗಳಿಗೆ ಹೊಣೆಯಾಗಲು ರೈತ ಪಕ್ಷ ಇನ್ನು ಸಿದ್ಧವಿಲ್ಲ ಎಂದು ಎಚ್ಚರಿಸುವ ಸರ್ವೋಚ್ಚ ಸಮಿತಿ ಸರಕಾರದ ಆರ್ಥಿಕ ಧೋರಣೆಯಲ್ಲಿ ತಿದ್ದುಪಡಿಯಾಗಬೇಕು ಎಂದಿದೆ.



ಪಿ.ಎಲ್.ಒ. ಮುಖಂಡ ಯಾಸೆರ್ ಅರಾಫತ್‌ರೊಂದಿಗೆ ಇ.ಎಂ.ಎಸ್. ಮತ್ತು ಗುಜ್ರಾಲ್

ಡಿ.ವೈ.ಎಫ್.ಐ.

ಬಳ್ಳಾರಿ ಜಿಲ್ಲಾ ಸಮಿತಿ ಸಭೆ

ಡಿ.ವೈ.ಎಫ್.ಐ.ನ ಬಳ್ಳಾರಿ ಜಿಲ್ಲಾಸಮಿತಿ ಏಪ್ರಿಲ್ ೭ ರಂದು ಸಂಡೂರು ತಾಲ್ಲೂಕಿನ ತೋರಣಗಲ್ಲಿನಲ್ಲಿ ನಡೆಯಿತು.

ಮೇ ೧ ರಿಂದ ೧೫ರವರೆಗೆ ಸದಸ್ಯತ್ವ ನೋಂದಾವಣೆ, ಜೂನ್ ತಿಂಗಳಲ್ಲಿ ಹಂಪಿಯಲ್ಲಿ ಡಿ.ವೈ.ಎಫ್.ಐ.ನ ರಾಜ್ಯಮಟ್ಟ ಅಧ್ಯಯನ ಶಿಬಿರವನ್ನು ಯಶಸ್ವಿಗೊಳಿಸುವ ಬಗ್ಗೆ, ಘಟಕಗಳು, ತಾಲ್ಲೂಕು, ಜಿಲ್ಲಾ ಸಮ್ಮೇಳನ ನಡೆಸುವ ಬಗ್ಗೆ ಹಾಗೂ ವಿಜಯನಗರ ಉಕ್ಕಿನ ಕಾರ್ಖಾನೆ ಯೋಜನೆಯನ್ನು ಎಂಟನೇ ಪಂಚ ವಾರ್ಷಿಕ ಯೋಜನೆಯಲ್ಲಿ ಸೇರಿಸಲು ಒತ್ತಾಯಿಸಿ ಪ್ರಚಾರ ಪ್ರಕ್ಷೋಭೆ ನಡೆಸಲು ತೀರ್ಮಾನಿಸಲಾಯಿತು. ಕಾಂ. ಎಂ. ಜಂಭಯ್ಯ ನಾಯಕ್‌ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಕಾಂ ಸುರೇಶ್ ಕುಪ್ಪಗಿ ವರದಿ ಮಂಡಿಸಿದರು. ರಾಜ್ಯ ಕಾರ್ಯದರ್ಶಿ ಕಾಂ.ಎಸ್.ಶಿವರಾಂ. ಜಿಲ್ಲಾ ಸಮಿತಿ ಸದಸ್ಯರನ್ನುದ್ದೇಶಿಸಿ ಮಾತನಾಡಿದರು.

ಘಟಕ ಆರಂಭ

ಬಳ್ಳಾರಿ ಜಿಲ್ಲೆಯ ಶಿರುಗುಪ್ಪದಲ್ಲಿ ಏಪ್ರಿಲ್ ೫ರಂದು ಡಿ.ವೈ.ಎಫ್.ಐ. ಘಟಕ ಆರಂಭವಾಗಿದೆ. ರಾಜ್ಯ ಕಾರ್ಯದರ್ಶಿ ಎಸ್. ಶಿವರಾಂ ಹಾಗೂ ಎಸ್.ಎಫ್.ಐ. ಮುಖಂಡ ಎಲ್. ಮಂಜುನಾಥ ಈ ಸ್ಥಾಪನಾ ಸಭೆಯಲ್ಲಿ ಹಾಜರಿದ್ದರು.

ಕಾಂ. ಈರಣ್ಣ ಸಂಚಾಲಕರಾಗಿರುವ ೧೫ ಜನರ ಸಮಿತಿಯ ಆಯ್ಕೆಮಾಡಿದ ಸಭೆ ನಗರದ ಪೆಟ್ಟಿ ಅಂಗಡಿಗಳವರು ಮತ್ತು ಪುರಸಭೆ ನಡುವೆ ನೇರ ಸಂಬಂಧ ವಿದ್ದು, ಮಧ್ಯವರ್ತಿಗಳ ಪ್ರವೇಶ ರದ್ದಾಗಬೇಕೆಂದು ಹೋರಾಟ ನಡೆಸಲು ನಿರ್ಧರಿಸಿತು.

ಬಂಟ್ವಾಳ ಕಬಡ್ಡಿ ಪಂದ್ಯಾಟ

ಬಂಟ್ವಾಳ ತಾಲ್ಲೂಕು ಡಿ.ವೈ.ಎಫ್.ಐ. ತಾಲ್ಲೂಕು ಮಟ್ಟದ ಹೊನಲು ಬೆಳಕಿನ ಕಬಡ್ಡಿ ಪಂದ್ಯಾಟವನ್ನು ಏರ್ಪಡಿಸಿತ್ತು. ಇದರಲ್ಲಿ ಒಟ್ಟು ೧೪ ತಂಡಗಳು ಭಾಗವಹಿಸಿದ್ದವು. ಆಜಾದ ಕಲ್ಲ ತಂಡ ಮೊದಲ ಸ್ಥಾನಪಡೆಯಿತು. ವಿಜಯಲಕ್ಷ್ಮಿ ನರಿಕೊಂಬು ತಂಡ ಎರಡನೇ ಸ್ಥಾನ ಪಡೆಯಿತು. ಕೆ. ಜಗನಾಥ್ ಬಹುಮಾನ ವಿತರಣೆ ಮಾಡಿದರು.

ಪಂದ್ಯಾಟವನ್ನು ಡಿ.ವೈ.ಎಫ್.ಐ. ದ.ಕ. ಜಿಲ್ಲಾ ಕಾರ್ಯದರ್ಶಿ ಆರ್. ಜಯಕುಮಾರ್ ಉದ್ಘಾಟಿಸಿದರು. ಡಿ.ವೈ.ಎಫ್.ಐ. ತಾಲ್ಲೂಕು ಅಧ್ಯಕ್ಷ ಜನಾರ್ಧನ್ ಕುಲಾಲ್ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ರೈತ ಸಂಘದ ಬಿ.ವಾಸುಗಟ್ಟಿ, ಬಿ. ಮಂಜುನಾಥ ಸಪಲ್ಯ. ಮತ್ತು ಪತ್ರಕರ್ತ ಶ್ರೀ ಕೆ. ವಿಶ್ವನಾಥರು ಉಪಸ್ಥಿತರಿದ್ದರು. ಬಂಟ್ವಾಳ ತಾಲ್ಲೂಕು ಕಾರ್ಯದರ್ಶಿ ಉದಯಕುಮಾರ್ ಕೊನೆಯಲ್ಲಿ ಧನ್ಯವಾದ ನೀಡಿದರು.

ಅಮರ ಕಲಾವಿದನ ಸ್ಮರಣೆಯಲ್ಲಿ ಶಿರಗುಪ್ಪದಲ್ಲಿ ಕವಿಗೋಷ್ಟಿ

ಅಮರ ಕಲಾವಿದ ಸಫ್ದರ್ ಹಾಶ್ಮಿಯವರ ನೆನಪಿನಲ್ಲಿ ಸಮುದಾಯದ ಶಿರುಗುಪ್ಪ ಘಟಕ ಕವಿಗೋಷ್ಟಿ ಹಾಗೂ ವಿಚಾರ ಸಂಕಿರಣವನ್ನು ಏರ್ಪಡಿಸಿತು.

ಸಮುದಾಯದ ಕೇಂದ್ರ ಸಮಿತಿ ಸದಸ್ಯ ಪ್ರಭಾಕರ್, ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಎಸ್.ವೈ. ಗುರುಶಾಂತ್, ರಾಜ್ಯ ಅಧ್ಯಕ್ಷ ಜೆ.ಸಿ. ಬಯ್ಯಾರೆಡ್ಡಿಯವರು ಇದರಲ್ಲಿ ಭಾಗವಹಿಸಿದ್ದರು.

ಹೆಚ್. ಚನ್ನಬಸಪ್ಪ, ಸದಾನಂದ ಬೇಗಾರು ಮತ್ತಿತರ ಕವಿಗಳು ಸ್ವರಚಿತ ಕವನಗಳನ್ನು ಓದಿದರು.

ನಿವೇಶನರಹಿತರಿಗಾಗಿ ಹೊಸಪೇಟೆಡಿ.ಯು.ಎಫ್.ಐ.ನ ಯಶಸ್ವಿ ಹೋರಾಟ

ಡಿ.ವೈ.ಎಫ್.ಐ. ಹೊಸಪೇಟೆ ಘಟಕವು ೪-೪-೯೦ ರಂದು ನಗರದ ಬಡವಸತಿಹೀನರಿಗೆ ಸರ್ಕಾರಿ ಜಮೀನು ನಂ. ೨೩೧ರಲ್ಲಿ ಸುಮಾರು ೧೫೦ ಕ್ಕೂ ಮಿಗಿಲಾಗಿ ಗುಡಿಸಲು ಕಟ್ಟಿಕೊಳ್ಳಲು ನಿವೇಶನ ಹಂಚಿತು. ತಾಲ್ಲೂಕ್ ಕಛೇರಿಯ ಟ್ರಾಕ್ಟರ್‌ಗಳು ಗುಡಿಸಲು ಕಟ್ಟಲು ಬೇಕಾದ ಸಾಮಗ್ರಿಗಳನ್ನು ಸಾಗಿಸಿ ಸಹಕರಿಸಿದುವು.

ಸರ್ವೆ ನಂ.೨೩೧ರಲ್ಲಿ ಡಿ.ವೈ.ಎಫ್.ಐನ ಹತ್ತಾರು ಬ್ಯಾನರ್ ಭಾವುಟಗಳನ್ನು ಹಿಡಿದು ಕಾರ್ಯಕರ್ತರು ವಸತಿ ಹೀನರಿಗೆ ಹಕ್ಕು ಪತ್ರಗಳನ್ನು ನೀಡಿದರು. ರಾಜ್ಯ ಸಮಿತಿಯ ಸದಸ್ಯ ಹಾಗೂ ಜಿಲ್ಲಾ ಸಮಿತಿಯ ಅಧ್ಯಕ್ಷ ಕಾಂ. ಜಂಬಯ್ಯ ನಾಯಕ ನೇತೃತ್ವವಹಿಸಿದ್ದರು. ರಾಜ್ಯ ಕಾರ್ಯದರ್ಶಿ ಕಾಂ. ಎಸ್.ಶಿವರಾಂ ಇವರು ಕೂಡ ಅವಲೋಕಿಸಿದರು.

ಭದ್ರಾವತಿಯಲ್ಲಿ ಮಹಿಳಾ ಸಂಘಟನೆ ಸಭೆ

ಇಲ್ಲಿಯ ಪುರಸಭಾಂಗಣದಲ್ಲಿ ಏಪ್ರಿಲ್ ೨೨ ರಂದು ಮಹಿಳಾ ಸಂಘಟನೆಯ ಸಭೆ ನಡೆಯಿತು. ಆರೋಗ್ಯ ಮೇರಿಯಮ್ಮ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ರಾಜ್ಯ ಮುಖಂಡೆ ಕೆ.ಎಸ್. ವಿಮಲಾ ಮುಖ್ಯ ಅತಿಥಿಯಾಗಿದ್ದರು. ಸಿ.ಪಿ.ಐ.(ಎಂ) ಜಿಲ್ಲಾ ಕಾರ್ಯದರ್ಶಿ ಎಸ್.ಬಿ. ಶಿವಶಂಕರ್, ವಿ.ಐ.ಎಸ್.ಎಲ್. ಕಾರ್ಮಿಕ ಸಂಘದ ಉಪಾಧ್ಯಕ್ಷ ಎಲ್. ರಂಗೇಗೌಡರು ಸಭೆಗೆ ಶುಭ ಕೋರಿದರು. ಆರಂಭದಲ್ಲಿ ಮೀನಾಕ್ಷಿ ಸ್ವಾಗತಿಸಿದರು. ಪುಟ್ಟ ಬಾಲಕಿ ಎಂ.ಎನ್. ಅಶ್ವಿನಿ ವಂದನಾರ್ಪಣೆ ಮಾಡಿದರು.

ರಘುನಾಥಹಳ್ಳಿಯಲ್ಲಿ ಭಗತ್‌ಸಿಂಗ್ ದಿನಾಚರಣೆ

ರಾಯಚೂರು ಜಿಲ್ಲೆಯ ರಘುನಾಥ ಹಳ್ಳಿಯ ಡಿ.ವೈ.ಎಫ್.ಐ. ಗ್ರಾಮ ಘಟಕ ಮಾರ್ಚ್ ೨೩ ರಂದು ಭಗತ್‌ಸಿಂಗ್ ಹುತಾತ್ಮ ದಿನಾಚರಣೆ ನಡೆಸಿತು. ಸುಮಾರು ೯೦ ಜನ ಊರಿನ ರೈತರು, ಕೃಷಿ ಕಾರ್ಮಿಕರು, ಮಹಿಳೆಯರು ಭಾಗವಹಿಸಿದ್ದ ಈ ಸಭೆಯ ಅಧ್ಯಕ್ಷತೆಯನ್ನು ಕಾಂ. ಪರಪ್ಪ ವಹಿಸಿದ್ದರು. ಬಸವರಾಜ ಟೇಲರ ಸ್ವಾಗತಿಸಿದರು. ರಾಯಚೂರು ನಗರ ಡಿ.ವೈ.ಎಫ್.ಐ.ನ ಕಾಂ. ಸೂರ್ಯಕಾಂತ ಆಗಮಿಸಿದ್ದರು. ಶ್ರೀ ಹನ್ಮಂತ ವಂದಿಸಿದರು.

ಕುಚ್ಚಟ್ಟು ಹೊಳೆಯಲ್ಲಿ ಮುಳುಗಿ ನೀರು ಪಾಲಾಗುತ್ತಿದ್ದ ಮಕ್ಕಳ ಪ್ರಾಣ ಉಳಿಸಿದ ಸಾಹಸಿ ಕಾರ್ಮಿಕ

ಕುಂದಾಪುರ ಏಪ್ರಿಲ್ ೧೭.

ಕುಂದಾಪುರ ತಾಲೂಕು ಕಂಡ್ಲೂರು ಗ್ರಾಮದ ಕುಚ್ಚಟ್ಟಿನ ಹಬ್ಬಾಗಿಲುಮನೆ ನೆಲ್ಲಕಟ್ಟೆ ರಾಮಪೂಜಾರಿಯವರ ಮಕ್ಕಳಾದ ವಿಜಯ (೧೦ ವರ್ಷ) ಮತ್ತು ಉದಯ (೧೨ ವರ್ಷ) ಇವರು ಕುಚ್ಚಟ್ಟು ಹೊಳೆಯಲ್ಲಿ ಸ್ನಾನ ಮಾಡುತ್ತಿದ್ದಾಗ ನೀರಿನ ಸೆಳೆತಕ್ಕೆ ಸಿಕ್ಕಿ ನೀರಿನ ಆಳಕ್ಕೆ ಮುಳುಗಿ, ತೇಲಿ ಹೋಗುವುದನ್ನು ಕಂಡು ನದಿ ದಡದಲ್ಲಿರುವ ಕಿರಿಯ ತಂಗಿಯ ಬೊಬ್ಬೆ ಕೇಳಿದ ಇಲ್ಲಿಯ ಪ್ರಭಾಕರ ಟೈಲ್ಸ್‌ವರ್ಕ್ಸ್ ಗುಲ್ವಾಡಿ ಕಾರ್ಖಾನೆಯ ಕಾರ್ಮಿಕ ಎಸ್.ಬಾಬು ಉಟ್ಟ ಬಟ್ಟೆಯಲ್ಲೇ ನದಿಗೆ ಧುಮುಕಿ ಪ್ರಾಣಾಪಾಯಕ್ಕೆ ಸಿಲುಕಿ ನೀರುಪಾಲಾಗುತ್ತಿದ್ದ ಇಬ್ಬರನ್ನು ಹಿಡಿದು ಈಜಿಕೊಂಡು ದಡಕ್ಕೆ ತಂದು ಪ್ರಾಣಾಪಾಯದಿಂದ ಪಾರು ಮಾಡಿದರು. ಅಸಹಾಯಕ ಮಕ್ಕಳ ಪ್ರಾಣ ಉಳಿಸಿದ ಸಾಹಸಿಗ ಎಸ್.ಬಾಬುರವರ ಧೀರತನಕ್ಕೆ ಗ್ರಾಮಸ್ಥರು ಸುತ್ತಲೂಕೊಂಡು ಮೆಚ್ಚುಗೆ ವ್ಯಕ್ತಪಡಿಸಿ ಕೊಂಡಾಡಿದರು.

'ಕೋಮುವಾದದ ಆಟ ಎಂದೆಂದೂ ಸಾಗದು' ಎಂದು ಸಾರೋಣ ಬನ್ನಿ

(ಪಿ.ಡಿ. ಸಂಪಾದಕೀಯ)

"ಹಿಂದೂ ರಾಷ್ಟ್ರ"ದ ಧರ್ಮಯುದ್ಧ ಕೋರರ ದನಿ ಬೊಬ್ಬೆಯಾಗುತ್ತಿದೆ. ದಿನೇ ದಿನೇ ಕರ್ಕಶಗೊಳ್ಳುತ್ತಿದೆ. ಅಯೋಧ್ಯೆಯಲ್ಲಿ ಬಾಬ್ರಿಮಸೀದಿ ಕೆಡವಿ ದೇವಸ್ಥಾನ ಕಟ್ಟುವ ತನ್ನ ನಿರ್ಧಾರವನ್ನು ಜ್ಯಾರಿಗೊಳಿಸಲು ವಿಶ್ವ ಹಿಂದೂ ಪರಿಷತ್ತು ನಿರ್ಧರಿಸಿದೆ. ಅದರ ಗಲಭೆಕೋರ ಪಡೆಗಳಾದ ಭಜರಂಗ್ ದಳ ಮತ್ತಿತರ ಸಶಸ್ತ್ರ ತಂಡಗಳನ್ನು ಗಲಭೆ ಅರಾಜಕತೆ ಸೃಷ್ಟಿಸಲು ಹರಿಯ ಬಿಡಲಾಗಿದೆ. ಅವರು ಮತ್ತೆ ಲೂಟಿಯಲ್ಲಿ ನಿರತರಾಗಿದ್ದಾರೆ. ಬಿಹಾರದ ಜಮ್‌ಶೇದಪುರ, ಭಾಗಲ್ಪುರ, ಮಧ್ಯಪ್ರದೇಶದ ನವಾಡಾ, ಉತ್ತರ ಪ್ರದೇಶದ ಕಾನಪುರ, ಮಥುರಾ.. ಚುನಾವಣಾ ನಂತರದ ಸನ್ನಿವೇಶದಲ್ಲಿ ಕೋಮು ವಿದ್ವೇಷದ ಉರಿಜ್ವಾಲೆ ಹರಡುವ ಅವರ ನಿರಂತರ ಪ್ರಯತ್ನಗಳ ಗುರುತು ಕಂಬಗಳು ಇವೆಲ್ಲಾ.

ಕಾಶ್ಮೀರ, ಪಂಜಾಬಿನಲ್ಲಿ ಭಯೋತ್ಪಾದಕತೆಯನ್ನು ತಡೆಯಲು ಸರ್ವಪ್ರಯತ್ನ ನಡೆಸುತ್ತಿರುವಾಗ ಈ ರಾಜ್ಯಗಳಿಂದ ಗುಳೆ ಹೋಗಿ ದಿಲ್ಲಿ, ಜಮ್ಮು ಮತ್ತಿತರ ಕಡೆ ನಿರಾಶ್ರಿತರಾಗಿ ನೆಲೆಸಿರುವವರ ನಡುವೆ ಬಿ.ಜೆ.ಪಿ., ಆರ್.ಎಸ್.ಎಸ್.ಗಳಂತಹ ಕೋಮು ಸಂಘಟನೆಗಳು ನಿರಂತರ ಕೋಮು ಅಪಪ್ರಚಾರದಲ್ಲಿ ತೊಡಗಿವೆ. ಅಯೋಧ್ಯೆಯ ನಂತರ ಮಥುರೆ ಮತ್ತು ವಾರಾಣಾಸಿ ಎಂದು ವಿ.ಹೆಚ್.ಪಿ. ಸಾರಿದೆ. ಎಲ್ಲೆಡೆಯೂ ಕಾರ್ಯಾಚರಣೆಯ ವಿಧಿ ಒಂದೇ. ಮಸೀದೆಗಳನ್ನು ಕೆಡವಿದೇವಸ್ಥಾನ ಕಟ್ಟುವುದು. ಹಿಂದೂ ರಾಷ್ಟ್ರ ಕಟ್ಟುವ ದಾರಿಯಲ್ಲಿ ತಾವಿದ್ದೇವೆ ಎಂದು ಅವರು ಜಂಭ ಕೊಚ್ಚಿಕೊಳ್ಳ ಲಾರಂಭಿಸಿದ್ದಾರೆ.

ಇದು ದೇಶವನ್ನು ಚೂರು ಚೂರಾಗಿಸುವ ಖಂಡಿತ ಮಾರ್ಗ, ಯಾಕೆಂದರೆ ಭಾರತ ಹಿಂದೂ ರಾಷ್ಟ್ರವಾದರೆ ಮುಸ್ಲಿಂ ಕಾಶ್ಮೀರ, ಸಿಖ್ ಪಂಜಾಬ್, ಕ್ರಿಶ್ಚಿಯನ್ ಈಶಾನ್ಯ ಭಾರತ ಕೂಡಾ ಧರ್ಮದ ಆಧಾರದ ಮೇಲೆ ಪ್ರತ್ಯೇಕತೆಯ ಬೇಡಿಕೆ ಮುಂದಿಡುತ್ತವೆ. ವಿಭಿನ್ನ ಭಾಷಾ, ಸಾಂಸ್ಕೃತಿಕ ಪರಂಪರೆಯುಳ್ಳ ದೇಶೀ ಗುಂಪುಗಳನ್ನು ಧರ್ಮ ಒಂದಾಗಿ ಬೆಸೆಯಬಲ್ಲದೆ? ದೇಶವನ್ನು ಅಖಂಡ ಘಟಕವಾಗಿಸಬಲ್ಲದೇ? ಖಂಡಿತಾ ಸಾಧ್ಯವಿಲ್ಲ. ಸಾಧ್ಯವಾಗಿದ್ದರೆ ಪಾಕಿಸ್ತಾನ ಏಕೆ ವಿಘಟನೆಗೊಂಡಿತು? ಬಾಂಗ್ಲಾ ದೇಶ ಏಕೆ ಹುಟ್ಟಿತು? ಪಾಕಿಸ್ಥಾನವನ್ನು ಒಂದು ಮಹಾನ್ ದೇಶವಾಗಿ ಬೆಸೆಯುವಲ್ಲಿ ವಿಫಲಗೊಂಡಿತು ಎಂಬುದು ಸಿದ್ಧವಾಗಿದೆ. ಇತರ ಇಸ್ಲಾಮೀ ದೇಶಗಳ ಕಥೆಯೂ ಇದೇ. ಭಾರತದಲ್ಲೂ ಇಂತಹ ಪ್ರಯತ್ನಗಳು ಸಫಲವಾಗಲಾರವು. ಹಿಂದೂ ರಾಷ್ಟ್ರದ ಪರಿಕಲ್ಪನೆ ದೇಶದ ವಿಘಟನೆಗೆ ದಾರಿ ಮಾಡಿಕೊಡಬಹುದಷ್ಟೆ.

ಬಿ.ಜೆ.ಪಿ. ತನ್ನ ಜವಾಬ್ದಾರಿ ತಿಳಿದುಕೊಂಡು ತಾನು ಸರ್ಕಾರ ರಚಿಸಿದ ರಾಜ್ಯಗಳಲ್ಲಿ ಆಡಳಿತದ ಕೆಲಸದಲ್ಲಿ ತೊಡಗಬಹುದೆಂಬುದು ಬಹು ಜನರ ನಿರೀಕ್ಷೆಯಾಗಿತ್ತು. ಯಶಸ್ವಿಯಾಗಿ ಆಡಳಿತ ನಡೆಸಬೇಕೆಂದರೆ ಶಾಂತಿ ಅತ್ಯಗತ್ಯ. ಎರಡು ಕೋಮುಗಳ ನಡುವೆ ಕಹಿ ತುಂಬುವ ಕೋಮು ಜ್ವಾಲೆ ಅವೆರಡರ ನಡುವೆ ಸೃಷ್ಟಿಸುವ ದೀರ್ಘ ವೈರತ್ವದ ಭಾವನೆಯ ನಡುವೆ ಯಾವುದೇ ಸರಕಾರದಕ್ಷತೆಯಿಂದ ಕೆಲಸ ಮಾಡಲು ಸಾಧ್ಯವಿಲ್ಲ. ಬಿ.ಜೆ.ಪಿ. ಇದನ್ನು ಅರಿತುಕೊಳ್ಳುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಈ ನಿರೀಕ್ಷೆಹುಸಿಯಾಗಿದೆ. ಇದುವರೆಗೂ ತನ್ನ ಅಂಗಸಂಸ್ಥೆಗಳಾದ ವಿ.ಹೆಚ್.ಪಿ. ಮುಂತಾದವುಗಳ ಬೇಜಬ್ದಾರಿ,ಆತ್ಮಹತ್ಯಾಕಾರಿ ಕ್ರಮಗಳನ್ನು ಬಿ.ಜೆ.ಪಿ. ಖಂಡಿಸಿದ ದಾಖಲೆಯಿಲ್ಲ.

ಆದ್ದರಿಂದ ಕೋಮು ಹಾಗೂ ಛಿದ್ರಕಾರಿ ಶಕ್ತಿಗಳ ವಿರುದ್ಧ ವ್ಯಾಪಕ ಜನತಾ ಪ್ರಕ್ಷೋಭೆ ನಡೆಸದೆ ದೇಶದ ಜಾತ್ಯತೀತ, ಪ್ರಜಾಪ್ರಭುತ್ವ ಶಕ್ತಿಗಳಿಗೆ ಅನನ್ಯ ಮಾರ್ಗವಿಲ್ಲದಂತಾಗಿದೆ. ಸರ್ಕಾರಕ್ಕೆ ದೃಢ ಮನಸ್ಸಿದ್ದರೆ, ಅದು ಜಾಗರೂಕವಾಗಿದ್ದರೆ ಕೋಮು ದಂಗೆಯನ್ನು ತಕ್ಷಣ ಅಡಗಿಸಬಹುದು ಎಂಬುದಕ್ಕೆ ಕಾನಪುರ ಇತ್ತೀಚಿನ ಉದಾಹರಣೆ. ಸರ್ಕಾರೀ ಕ್ರಮಕ್ಕಿಂತಲೂ ಹೆಚ್ಚಾಗಿ ಬೇಕಾಗಿರುವುದು ಪ್ರತಿ ಹಂತದಲ್ಲಿ ಕೋಮುವಾದದ ವಿರುದ್ಧ ಜನರ ಪಾತ್ರ. ಸಮಾವೇಶಗಳು, ವಿಚಾರ ಸಂಕಿರಣ, ಸಾರ್ವಜನಿಕ ಸಭೆಗಳು, ಮತಪ್ರದರ್ಶನಗಳು, ಕೋಮುಸೌಹಾರ್ದ ಯಾತ್ರೆ ಹೀಗೆ ಯಾವುದು ಸಾಧ್ಯವೋ ಅವೆಲ್ಲಾ ವಿಧಾನಗಳನ್ನು ಬಳಸಿ ಪ್ರಚಾರ ನಡೆಸಬೇಕು. ನಮ್ಮ ಬಹುಪಾಲು ಜನತೆ ಜಾತ್ಯತೀತ ದೃಷ್ಟಿಕೋಣದವರು ಎಂಬ ಸಂಗತಿಯನ್ನು ನಾವೆಂದೂ ಮರೆಯಬಾರದು. ಈ ಗಟ್ಟಿ ನೆಲದ ಮೇಲೆ ಎಲ್ಲಾ ಜಾತ್ಯತೀತ, ಪ್ರಜಾಪ್ರಭುತ್ವ ಶಕ್ತಿಗಳು ಮುನ್ನಡೆಯಬೇಕು. ನಿಜ ಬಹಳ ಅಪಾಯಕಾರಿ, ಸ್ಫೋಟಕ ಪರಿಸ್ಥಿತಿಯಿದೆ. ಆದರೆ ಕೋಮುಸೌಹಾರ್ದದ ಹೋರಾಟದ ಇತಿಹಾಸ ಎಲ್ಲಾ ಕೋಮುಗಳ ಜನಸಾಮಾನ್ಯರ ನಡುವೆ ಸದ್ಭಾವನೆ, ಸೌಹಾರ್ದ ಕಾಪಾಡಲು ಕೋಮುವಾದದ ವಿರುದ್ಧ ಆತ್ಮ ಬಲಿದಾನ ಮಾಡಿದ, ಅಜೇಯ ಸ್ಥೈರ್ಯ ತೋರಿದ ಹಲವಾರು ಸ್ಮರಣೀಯ ಉದಾಹರಣೆಗಳಿಂದ ತುಂಬಿದೆ. ಇದು ಭಾರತದೇಶದ ಇತಿಹಾಸದ ಭವ್ಯ ಪರಂಪರೆಯ ಒಂದು ಭಾಗ. ಏನೇ ಕಷ್ಟಕಾರ್ಪಣ್ಯ ಬಂದರೂ ಈ ಪರಂಪರೆ ಉಳಿಯುತ್ತದೆ. ದೇಶದಲ್ಲಿ ಕೋಮುವಾದದ ಆಟ ಎಂದೆಂದೂ ಸಾಗದು ಎಂದು ದೃಢ ಮನಸ್ಸಿನಿಂದ ಸಮಸ್ತ ಭಾರತಕ್ಕೆ, ಸಮಸ್ತ ಜಗತ್ತಿಗೆ ನಾವು ಸಾರಬೇಕು.

ಪುರಸಭಾ ಚುನಾವಣೆ....

ಅಘೋಷಿತ ಬಹಿಷ್ಕಾರ ಹಾಕಿದ್ದಾರೆಂಬುದೇ ನಮ್ಮ ರಾಜ್ಯದಲ್ಲಿ ಪ್ರಜಾಸತ್ತೆ "ವಿಜೃಂಭಿಸುತ್ತಿರುವ ರೀತಿಯ ಬಗ್ಗೆ ಜನರ ಅಭಿಪ್ರಾಯದ ನೇರ ಸೂಚಿ. ಕಾಂಗ್ರೆ ಪಕ್ಷ ನಡೆಸುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ನೀಡಿದ ಮತ. ಈ ವಾತಾವರಣವನ್ನೂ ಅನೇಕ ವರ್ಷಗಳು ನಡೆಯದೆ ಮುಂದೆ ಹಾಕಲ್ಪಟ್ಟ ಪುರಸಭಾ ಚುನಾವಣೆಗಳನ್ನು ಜನತಾ ಪಕ್ಷದ ರಾಜ್ಯ ಸರ್ಕಾರ ನಡೆಸಿದಾಗಿನ ವಾತಾವರಣವನ್ನೂ ನೆನಪಿಸಿ ಕೊಂಡರೆ ಇದು ಮತ್ತಷ್ಟು ಸ್ಪಷ್ಟವಾಗುತ್ತದೆ.

ಹಿಂದೆ ೪೮ ರಿಂದ ಆರಂಭವಾಗಿ ೮೩ ರವರೆಗೆ ಆಡಳಿತ ನಡೆಸಿದ ಕಾಂಗ್ರೆಸ್ ಸರ್ಕಾರಗಳು ವರ್ಷಗಟ್ಟಲೆ ನಗರ ಸಭಾ ಚುನಾವಣೆಯನ್ನು ಮುಂದೂಡಿ ಅಲ್ಲಿನ ಮತದಾರ ಜನತೆ ಕಾಂಗ್ರೆಸ್ ಪಕ್ಷದ ಬಗೆಗಿನ ತಮ್ಮ ಅಸಮಾಧಾನವನ್ನು ಕುದಿಯನ್ನು ವ್ಯಕ್ತಪಡಿಸುವ ಶಾಂತಿಯುತ ಮಾರ್ಗಕ್ಕೆ ಕಲ್ಲು ಹಾಕುತ್ತಿದ್ದ, ಪ್ರಜಾಸತ್ತಾತ್ಮಕ ವಿಧಾನಗಳನ್ನು ಒಂದೊಂದಾಗಿ ತುಳಿಯುತ್ತಾ ಜನತೆಯಿಂದ ಆಯ್ಕೆಯಾದ ಪ್ರತಿನಿಧಿಗಳ ಬದಲಾಗಿ ವಿವಿಧ ಮಾಫಿಯಾ ಗ್ಯಾಂಗುಗಳಿಗೆ ಅವರ ನಾಯಕರುಗಳಿಗೆ, ಗೂಂಡಾಪಡೆಗಳಿಗೆ, ಕೊಳಚೆ ಪ್ರದೇಶಗಳಲ್ಲಿ ಕೊಳಕು ಪ್ರದೇಶದ ದೌಲತ್ತುದಾರರಿಗೆ ನಗರಾಡಳಿತವನ್ನು ಹಂಚಿಕೊಟ್ಟಿದ್ದ ಕಾಂಗ್ರೆ ಪಕ್ಷ ಚುನಾವಣೆಗಳನ್ನು ನಡೆಸಲೇ ಬೇಕಾದ, ನಡೆಸಿದೆವೆಂದು ಹೇಳಿ ಕೊಳ್ಳಲೇಬೇಕಾದ ಅನಿವಾರ್ಯತೆ ಬಂದರೆ ಎಂತಹ ಚುನಾವಣೆಗಳನ್ನು ನಡೆಸುತ್ತೇವೆಂದು ಈ ಚುನಾವಣೆಗಳ ಮೂಲಕ ತೋರಿಸಿಕೊಟ್ಟಿದ್ದಾರೆ.

ಹೀಗಾಗಿ ಈ ಚುನಾವಣೆಗಳನ್ನು ಶಾಂತಿಯುತವಾಗಿ, ಪ್ರಜಾಸತ್ತಾತ್ಮಕವಾಗಿ ನಡೆಸಿದವೆಂದು ಹೇಳುವ ಮುಖ್ಯಮಂತ್ರಿಗಳ ಮಾತು ಪ್ರಜಾಸತ್ತೆಯ ಪ್ರೇಮಿಗಳೆಲ್ಲರನ್ನೂ ಹೊಡೆದೆಬ್ಬಿಸಬೇಕಾಗಿದೆ. ಎಲ್ಲ ಪತ್ರಿಕೆಗಳು ಮಾರಕ ಹಿಂಸಾಚಾರ, ಚುನಾವಣೆಗಳಿಗೆ ಅಡ್ಡಿಯಾದ ಅನೇಕ ಕಥೆಗಳನ್ನು ಪುಂಖಾನುಪುಂಖವಾಗಿ ಎಲ್ಲರ ಎದುರು ಬಿಚ್ಚಿಡುತ್ತಿರುವಾಗ ನಾಚಿಕೆಗೇಡಿನ ಮಾತು. ಇದು ಕೂಡ ಕಾಂಗ್ರೆ ಸಂಸ್ಕೃತಿಯ ಒಂದು ಭಾಗವಷ್ಟೆ. ಇಂತಹ ಚುನಾವಣೆಗಳಲ್ಲಿ ಕೂಡ ಕಾಂಗ್ರೆ ಪಕ್ಷವಾಗಿ ಬಿದ್ದ ಮತಗಳೆಷ್ಟು ವಿರೋಧವಾಗಿ ಬಿದ್ದವೆಷ್ಟು? ವಿರೋಧವಾಗಿ ಮತಗಳೇ ಹೆಚ್ಚೆಂಬುದನ್ನು ಕಂಡರೆ ಕೇವಲ ನಾಲ್ಕು ತಿಂಗಳ ಕಾಂಗ್ರೆ ರಾಜ್ಯ ಸರ್ಕಾರದ ಬಗ್ಗೆ ಜನ ನೀಡಿದ ತೀರ್ಪು ನಿಜ ಬಣ್ಣದಲ್ಲಿ ಬಯಲಾಗುತ್ತದೆ.

ಐ.ಟಿ.ಐ. ವಿದ್ಯಾರ್ಥಿಗಳ ರಾಜ್ಯ ಸಮಾವೇಶ

ಮಾತೃಭಾಷೆಯಲ್ಲಿ ಪ್ರಶ್ನೆಪತ್ರಿಕೆ, ಸ್ಟೈಪಂಡ್ ನೂರು ಶೇಕಡಾ ಏರಿಕೆ, ಇತ್ಯಾದಿ ಕೇಂದ್ರ ಸರ್ಕಾರದ ಈಗಾಗಲೇ ತತ್ವಶಃ ಒಪ್ಪಿರುವ ಐ.ಟಿ.ಐ. ವಿದ್ಯಾರ್ಥಿಗಳ ಜ್ವಲಂತ ಪ್ರಶ್ನೆಗಳನ್ನು, ಕನಿಷ್ಟ ಕೂಲಿ ಜ್ಯಾರಿ ಮುಂತಾದ ಬೇಡಿಕೆಗಳನು ತಕ್ಷಣ ಜ್ಯಾರಿಗೊಳಿಸಬೇಕೆಂದು ಒತ್ತಾಯಿಸಲು, ಹೋರಾಟವನ್ನು ರೂಪಿಸಲು ಮೇ ೨೪ ರಂದು ಬೆಂಗಳೂರಿನಲ್ಲಿ ರಾಜ್ಯಸಮಾವೇಶ ನಡೆಯಲಿದೆ.

ಏಪ್ರಿಲ್ ೨೨ ರಂದು ಬಳ್ಳಾರಿ ಜಿಲ್ಲೆಯ ಶಿರಗುಪ್ಪದಲ್ಲಿ ನಡೆದ ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಮಂಡಳಿ ಸಭೆ ಈ ಬಗ್ಗೆ ತೀರ್ಮಾನ ಕೈಗೊಂಡಿತು.

ರಾಜ್ಯದ ಮೂಲೆ ಮೂಲೆಗಳಿಂದ ಸುಮಾರು ೨೫೦೦ ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ಕೇಂದ್ರ ಕಾರ್ಮಿಕ ಮಂತ್ರಿ ರಾಮವಿಲಾಸ್ ಪಾಸ್ವಾನ್‌ರನ್ನು ಈ ಸಮಾವೇಶ ಉದ್ಘಾಟನೆಗೆ ಆಹ್ವಾನಿಸಲಾಗುವುದು.

ಬೆಂಗಳೂರು ವಿ.ವಿ.ಯ ಇಂಜಿಯನಿಯರಿಂಗ್ ವಿದ್ಯಾರ್ಥಿಗಳ ಹೋರಾಟ ಬಿ.ಎಸ್ಸಿ. ಸಹಕಾರ, ಕೃಷಿ ಮಾರುಕಟ್ಟೆ ಬಿ.ಎಸ್ಸಿ ಅರಣ್ಯ ಪದವಿ ವಿದ್ಯಾರ್ಥಿಗಳ ಹೋರಾಟಕ್ಕೆ ಬೆಂಬಲವನ್ನು ವ್ಯಕಪಡಿಸಲಾಯಿತು.

ಅಖಿಲಭಾರತ ಕೃಷಿ ವಿದ್ಯಾರ್ಥಿಗಳ ಸಮಾವೇಶ

ಭಾರತ ವಿದ್ಯಾರ್ಥಿ ಫೆಡರೇಶನ್, (ಎಸ್.ಎಫ್.ಐ) ಕೇಂದ್ರ ಸಮಿತಿ, ತನ್ನ ಆಶ್ರಯದಲ್ಲಿ ಅಖಿಲ ಭಾರತ ಕೃಷಿ ವಿದ್ಯಾರ್ಥಿಗಳ ಸಮಾವೇಶವನ್ನು ಹರಿಯಾಣದ ಹಿಸ್ಸಾರಿನಲ್ಲಿ ಮೇ ೫ ಮತ್ತು ೬, ೧೯೯೦ ರಂದು ನಡೆಸಲಿದೆ.

ಈ ಸಮಾವೇಶದಲ್ಲಿ ದೇಶದ ಎಲ್ಲಾ ಕೃಷಿ ವಿದ್ಯಾರ್ಥಿಗಳ ಸಮಸ್ಯೆ ಮತ್ತು ಪರಿಹಾರ ಕುರಿತು ಚರ್ಚೆ ನಡೆಯಲಿದೆ. ದೇಶದ ಎಲ್ಲಾ ರಾಜ್ಯಗಳಿಂದ ನೂರಾರು ಪ್ರತಿನಿಧಿಗಳು ಭಾಗವಹಿಸಲಿದ್ದು ನಮ್ಮ ರಾಜ್ಯದಿಂದ ಸಹ ಐದು ಆಯ್ಕೆಯಾದ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಇದಕ್ಕೆ ಪೂರ್ವಭಾವಿಯಾಗಿ ಬೆಂಗಳೂರು, ಧಾರವಾಡ, ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಸಭೆ ನಡೆದು ತಯಾರಿ ನಡೆದಿದೆ.

ಈ ವಾರ ....

★ ಬೆಲೆಯೇರಿಕೆಯ ಪ್ರಮಾಣ ಬಜೆಟೋತ್ತರ ದಿನಗಳಲ್ಲಿಯೇ ಹೆಚ್ಚಾದುದಕ್ಕೆ ಕಾರಣಗಳಿಲ್ಲದಿಲ್ಲ. ಬೆಲೆಯೇರಿಕೆಯಿಂದ ಬಹುಮಟ್ಟಿಗೆ ನರಳುವವರು ಕಡಿಮೆ ಆದಾಯದವರು, ಅಸಂಘಟಿತ ವಲಯಗಳವರು. ದಾರಿದ್ರ್ಯ ನಿವಾರಣೆ ಗುರಿ ಘೋಷಿಸುವ ಯಾವುದೇ ಸರಕಾರದ ಮೊದಲ ಜವಾಬ್ದಾರಿ ಈ ವರ್ಗಗಳವರ ಕೊಳ್ಳುವ ಶಕ್ತಿ ಕುಂಠಿತವಾಗುವುದನ್ನು ತಪ್ಪಿಸುವುದು.

– ಪ್ರಜಾವಾಣಿ, ಎ. ೨೭

★ ಕಾನ್ಪುರದ ಹಿಂಸಾಚಾರವನ್ನು ಗಮನಿಸಿದಾಗ ಜಾತ್ಯತೀತ ರಾಷ್ಟ್ರದ ನೆಲ ಕೋಮು ವಿಷದ ಬೆಳೆಗೆ ಇನ್ನೂ ಫಲವತ್ತಾಗಿಯೇ ಇದೆ ಎಂಬ ಭಾವನೆ ಬರದೆ ಇರದು. ಧರ್ಮವು ದೇವರು ಮತ್ತು ವ್ಯಕ್ತಿಯ ನಡುವಿನ ಸಂಬಂಧವಾಗಿದ್ದರೂ ಜಾತಿಯ ಹೆಸರಿನಲ್ಲಿ ಸಮಾಜ ಘಾತುಕ ಶಕ್ತಿಗಳು ಸಮಾಜದ ಸ್ವಾಸ್ಥ್ಯವನ್ನು ಕೆಡಿಸುತ್ತಿವೆ.

– ಸಂಯುಕ್ತ ಕರ್ನಾಟಕ, ಎ. ೨೮

★ ಜನತಂತ್ರದಲ್ಲಿ ಅಂತಿಮವಾಗಿ ಜನತೆಯದೇ ಹೊಣೆ. ಜನತೆಯ ಹದ್ದುಗಣ್ಣಿನ ಪಹರೆ ಜನತಂತ್ರಕ್ಕೆ ಶ್ರೀರಕ್ಷೆ. ದೇಶಕ್ಕೆ ಏನಾದರೆ ನನಗೇನು ಎಂದು ತೆಪ್ಪಗೆ ಕುಳಿತು ಕೊಳ್ಳುವ ಜನ ಕಡೆಗೆ ಆಹ್ವಾನ ನೀಡುವುದು ದುಷ್ಟಶಕ್ತಿಗಳಿಗೆ.

– ಕನ್ನಡ ಪ್ರಭ, ಮೇ ೧

★ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದ್ದರಿಂದ ನಮ್ಮ ಪಕ್ಷ ಒಡೆದು ಚೂರು ಚೂರಾಯಿತು. ಬೃಹತ್ ಪ್ರಮಾಣದಲ್ಲಿ ಬೆಳೆದಿದ್ದ ನಮ್ಮ ಸಂಘಟನೆ ಕ್ಷೀಣಿಸಿತು.

– ಆರ್.ಎಸ್. ಗವಾಯಿ, ರಿಪಬ್ಲಿಕನ್ ಪಕ್ಷದ ಅಧ್ಯಕ್ಷ

★ ಮಹಾರಾಷ್ಟ್ರದ ಜನ ಕಡಿಮೆ ಅನಿಷ್ಟವನ್ನು ಆಯ್ಕೆ ಮಾಡಿದ್ದಾರೆ.

- ಮೃಣಾಲ್ ಗೋರೆ
ಮಹಾರಾಷ್ಟ್ರ ಜನತಾದಳದ ಅಧ್ಯಕ್ಷೆ

★ ಬಹಳ ಹಿಂದಿನ ವಿಷಯವೇನೂ ಅಲ್ಲ. ಅಮೆರಿಕಾ ತನಗೆ ಸರಿಯೇನಿಸಿದ ರಾಜಕೀಯ ಆಚರಣೆ ಹೇರಲು ತನ್ನ ಶಸ್ತ್ರ ಸಜ್ಜಿತ ಹಡಗುಗಳನ್ನು ವಿಶ್ವಾದ್ಯಂತ ಕಳುಹಿಸುತ್ತಿತ್ತು. ಈಗ ಅದು ತನಗೆ ಸರಿಯೇನಿಸುವ ವಾಣಿಜ್ಯ ವಿಧಾನಗಳನ್ನು ಹೇರಲು ತನ್ನ ವ್ಯಾಪಾರ ಮತ್ತು ಕಾನೂನು ಬಳಸುತ್ತಿದೆ.

– ಡೆಕ್ಕನ್ ಹೆರಾಲ್ಡ್, ಎ. ೩೦

★ ಅಧ್ಯಕ್ಷ ಬುಶ್ ಏನೇ ಹೇಳಲಿ ವಾಹನಗಳು, ಬಟ್ಟೆ, ಸಕ್ಕರೆಗೆ ಸಂಬಂಧಪಟ್ಟಂತೆ ಅಮೆರಿಕನ್ ವ್ಯಾಪಾರೀ ಆಚರಣೆ ಮುಕ್ತ ವ್ಯಾಪಾರದ ಮಾದರಿಗಳೇನೂ ಅಲ್ಲ.

– ಇಂಡಿಯನ್ ಎಕ್ಸ್‌ಪ್ರೆಸ್, ಎ - ೩೦

★ ಆನಂದ ಮಾರ್ಗ ಮುಖ್ಯ ಕಚೇರಿಯನ್ನು ೧೯೭೭ರಲ್ಲಿ ಪುರುಲಿಯಾಕ್ಕೆ ವರ್ಗಾಯಿಸಿದಂದಿನಿಂದ ಸ್ಥಳೀಯ ಜನರು ಮತ್ತು ಮಾರ್ಗಿಗಳ ನಡುವೆ ಘರ್ಷಣೆ ನಡೆಯುತ್ತಲೇ ಇದೆ... ಒಂದು ಸ್ವತಂತ್ರ ನಗರ (ಆನಂದ ನಗರ) ಕಟ್ಟುವ ಯತ್ನದಿಂದ ಅರಣ್ಯ ಭೂಮಿ ಮತ್ತು ಅರಣ್ಯ ಉತ್ಪನ್ನಗಳ ಮೇಲೆ, ಬುಡಕಟ್ಟು ಜನರ ಹಕ್ಕುಗಳ ಮೇಲೆ ಹಲ್ಲೆಯಾಗುವುದು ಖಂಡಿತ. ಆದ್ದರಿಂದ ಸಿ.ಪಿ.ಐ(ಎಂ) ಭಾಗವಹಿಸಲಿ, ಭಾಗವಹಿಸದಿರಲಿ ಘರ್ಷಣೆಗಳು ಅನಿವಾರ್ಯ

– ಇಂಡಿಯನ್ ಎಕ್ಸ್‌ಪ್ರೆಸ್, (ಎ.೨೯) ನಲ್ಲಿ ಒಂದು ಲೇಖನ.

Printed and published by P.Ramachandra Rao on behalf of Communist party of India (Marxist), Karnataka State Committee 56, K.V.Temple Street, Sultanpet, Bangalore - 560 053. Phone No. 75331. Editor: P.RAMACHANDRA RAO.